# ಗ್ರಾಹಕರು - FAQ

# ESAF 2.0 – StratoNeXt

**ಗೌಪ್ಯನೀಯತೆ**

ಈ ದಾಖಲೆಯು ಸ್ವಾಮ್ಯದ ಮಾಹಿತಿಯನ್ನು ಒಳಗೊಂಡಿದೆ ಹಾಗೂ ಇದನ್ನು ಅಧಿಕೃತ ಸ್ವೀಕೃತಿದಾರರಿಗಾಗಿ ಮಾತ್ರ ಉದ್ದೇಶಿಸಲಾಗಿದೆ. ಅಂತಿಮ ದಾಖಲೆಯು ESAF SFB ನ ಆಸ್ತಿಯಾಗಿದ್ದರೂ ಸಹ. ಈ ವಿಧಾನಗಳು, ಪ್ರಕ್ರಿಯೆಗಳು ಮತ್ತು ಕಾರ್ಯವಿಧಾನಗಳು Kyndryl ನ ಬೌದ್ಧಿಕ ಆಸ್ತಿಯಾಗಿ ಉಳಿಯುತ್ತವೆ ಹಾಗೂ ಇವುಗಳನ್ನು ಈ ಕಾರ್ಯಯೋಜನೆಯ ವ್ಯಾಪ್ತಿಯನ್ನು ಮೀರಿ ಬಹಿರಂಗಪಡಿಸಬಾರದು, ಮರು-ಉತ್ಪಾದಿಸಬಾರದು ಅಥವಾ ಬಳಸಿಕೊಳ್ಳಬಾರದು.
ಇಲ್ಲಿ ಒಳಗೊಂಡಿರುವ ಎಲ್ಲಾ ಮಾಹಿತಿಯನ್ನು ಗೌಪ್ಯವಾಗಿಡಬೇಕು. ESAF SFB ನಿಂದ ಅಧಿಕಾರ ಪಡೆದಿರುವ ವ್ಯಕ್ತಿಗಳು ಅಥವಾ ಸಂಸ್ಥೆಗಳು ಅಥವಾ ಅನ್ವಯವಾಗುವ ನೀತಿಗಳ ಅಡಿಯಲ್ಲಿ ಸ್ಪಷ್ಟವಾಗಿ ಅನುಮತಿಸಲಾದ ವ್ಯಕ್ತಿಗಳನ್ನು ಹೊರತುಪಡಿಸಿ, ಈ ದಾಖಲೆಯ ಯಾವುದೇ ಭಾಗವನ್ನು ಸಂಪೂರ್ಣವಾಗಿ ಅಥವಾ ಭಾಗಶಃ ಬಹಿರಂಗಪಡಿಸಬಾರದು, ಹಂಚಿಕೊಳ್ಳಬಾರದು ಅಥವಾ ಮರು-ಉತ್ಪಾದಿಸಬಾರದು.

ವಿಷಯಗಳ ಪರಿವಿಡಿ


1 ಪರಿಚಯ....4

2 ಗ್ರಾಹಕರ FAQ ಗಳು....4

2.1. ಬದಲಾವಣೆಯ ಕುರಿತು....4

3. ನನ್ನ ಬ್ಯಾಂಕಿಂಗ್ ಮೇಲಿನ ಪರಿಣಾಮ....7

***3.1 ಖಾತೆ ಮತ್ತು ಗ್ರಾಹಕರ ಮಾಹಿತಿ....7***

***3.2 ಮೊಬೈಲ್ ಬ್ಯಾಂಕಿಂಗ್ ಮತ್ತು ಇಂಟರ್ನೆಟ್ ಬ್ಯಾಂಕಿಂಗ್....8***

***3.3 ಚೆಕ್, ಪಾವತಿಗಳು ಮತ್ತು ವರ್ಗಾವಣೆ....10***

*ಉ: ಇಲ್ಲ, ಸಿಸ್ಟಮ್‌ಗಳು ಲಭ್ಯವಾದ ನಂತರವಷ್ಟೇ ನಿಮ್ಮ ಸಂಬಂಧಿತ ಖಾತೆಗೆ ಇತ್ಯರ್ಥ (ಸೆಟಲ್‌ಮೆಂಟ್) ಆಗುತ್ತದೆ....11*

*ಉ: ಹೌದು, ಅಪ್‌ಗ್ರೇಡ್ ಸಮಯದಲ್ಲಿ ಈ ಸೇವೆಗಳು ಲಭ್ಯವಿರುವುದಿಲ್ಲ....11*

***3.4 ಕಾರ್ಡ್‌ಗಳು – ಡೆಬಿಟ್ ಮತ್ತು ಕ್ರೆಡಿಟ್....12***

***3.5 ಸ್ಥಿರ ಠೇವಣಿ / ಆವರ್ತಕ ಠೇವಣಿಗಳು....13***

***3.6 ಸಾಲ ಮತ್ತು ಮರುಪಾವತಿಗಳು....14***

*ಉ: ಉನ್ನತೀಕರಣದ ಅವಧಿಯಲ್ಲಿ, NACH/ECS ಅಧ್ಯಾದೇಶಗಳನ್ನು ಪ್ರಕ್ರಿಯೆಗೊಳಿಸಲಾಗುವುದಿಲ್ಲ.*
*ಇದು 26 ಅಕ್ಟೋಬರ್ 2026 ರಂದು ಮರುಪ್ರಾರಂಭಗೊಳ್ಳುತ್ತದೆ....15*

***3.7 ಗ್ರಾಹಕ ನೆರವು ಮತ್ತು ಭದ್ರತೆ....15***

4. ಗ್ರಾಹಕರು ಕೈಗೊಳ್ಳಬೇಕಾಗಿರುವ ಕ್ರಮಗಳು....16

5. ಸಹಾಯ ಮತ್ತು ನೆರವು....17

6. ಡಿಜಿಟಲ್ ಮತ್ತು ವಹಿವಾಟು ಸೇವೆಗಳು....20

# 1 ಪೀಠಿಕೆ

ESAF Bank IT ಪರಿವರ್ತನೆಯ ಪ್ರಯಾಣವನ್ನು ಕೈಗೊಳ್ಳುತ್ತಿರುವ ಸಂದರ್ಭದಲ್ಲಿ, ಈ ಪರಿವರ್ತನೆಯ ಕುರಿತು ಮತ್ತು ಇದು ತಮ್ಮ ಮೇಲೆ ಹೇಗೆ ಪ್ರಭಾವ ಬೀರುವುದು ಎಂಬುದರ ಕುರಿತು ಗ್ರಾಹಕರು ಹಲವು ಪ್ರಶ್ನೆಗಳನ್ನು ಮಾಡಬಹುದು. ಈ ದಾಖಲೆಯನ್ನು ESAF ಪರಿವರ್ತನೆಯ ಉಪಕ್ರಮ, ಗ್ರಾಹಕರಿಗೆ ದೊರೆಯುವ ಪ್ರಯೋಜನಗಳು, ಎದುರಾಗಬಹುದಾದ ಸಾಮಾನ್ಯ ಸಮಸ್ಯೆಗಳು ಯಾವುವು, ಸಮಸ್ಯೆಗಳನ್ನು ಹೇಗೆ ಬಗೆಹರಿಸಿಕೊಳ್ಳುವುದು, ಬೆಂಬಲಕ್ಕಾಗಿ ಯಾರನ್ನು ಸಂಪರ್ಕಿಸುವುದು, ಮುಂತಾದವುಗಳನ್ನು ಬ್ಯಾಂಕ್ ಗ್ರಾಹಕರು ಅರ್ಥಮಾಡಿಕೊಳ್ಳಲು ಸಹಾಯ ಮಾಡುವುದಕ್ಕಾಗಿ ಸಿದ್ಧಪಡಿಸಲಾಗಿದೆ.
ಈ ಪ್ರಶ್ನೆಗಳನ್ನು ESAF L&D ಸಿದ್ಧಪಡಿಸಿದ್ದು, ಹಾಗೂ ಅವುಗಳಿಗೆ ತಕ್ಕಂತೆ ವ್ಯವಹಾರ ಕಾರ್ಯಾಚರಣಾ ತಂಡವು ಪ್ರತಿಕ್ರಿಯೆಗಳನ್ನು ನೀಡಿದೆ.

# 2 ಗ್ರಾಹಕರ FAQ ಗಳು

## 2.1. ಬದಲಾವಣೆಯ ಕುರಿತು

**ಪ್ರ: ಈ ಬದಲಾವಣೆಯು ಯಾವಾಗ ನಡೆಯುತ್ತದೆ?**

ಉ: *23 ಅಕ್ಟೋಬರ್ 2026 ರಂದು ಸಂಜೆ 6 ರಿಂದ 26 ಅಕ್ಟೋಬರ್ 2026 ರ ಬೆಳಿಗ್ಗೆ 10 ರವರೆಗೆ*

**ಪ್ರ: ಏನು ಬದಲಾಗುತ್ತಿದೆ?**

ಉ: StratoNeXt ಪರಿವರ್ತನಾ ಕಾರ್ಯಕ್ರಮವು ಮೂಲ **ವ್ಯವಹಾರದ ಅಪ್ಲಿಕೇಶನ್‌ಗಳು ಹಾಗೂ ಗ್ರಾಹಕರ ಮುಖಾಮುಖಿ ಅಪ್ಲಿಕೇಶನ್‌ಗಳ** ಉನ್ನತೀಕರಣ, ಸಿಸ್ಟಮ್‌ಗಳ ವಲಸೆ ಮತ್ತು ಗ್ರಾಹಕ-ಸಂಬಂಧಿತ ಪ್ರಕ್ರಿಯೆಗಳ ಮರುವಿನ್ಯಾಸವನ್ನು ಒಳಗೊಂಡಿರುತ್ತದೆ. ಈ ನೀಲಿನಕ್ಷೆಯು ಅತ್ಯುತ್ತಮ ಗ್ರಾಹಕ ಮತ್ತು ಸಿಬ್ಬಂದಿ ಅನುಭವಕ್ಕಾಗಿ ಪ್ರಮುಖ ಬದಲಾವಣೆಗಳನ್ನು ಪ್ರತಿಬಿಂಬಿಸುತ್ತದೆ, ಅವುಗಳಲ್ಲಿ ಕೆಲವು ಉದಾಹರಣೆಗಳೆಂದರೆ:

- ಹಿಂದಿನ FIS Profile CBS ನಿಂದ ಹೊಸ **Oracle Flexcube Core Banking System** ಗೆ ವಲಸೆ ಪ್ರಕ್ರಿಯೆಯನ್ನು ನಿಭಾಯಿಸುವುದು — ಇದು ಗ್ರಾಹಕರ ಮತ್ತು ಉತ್ಪನ್ನದ ಕಾರ್ಯಾಚರಣೆಗಳ ಹೃದಯಭಾಗವಾಗಿದೆ.
- ಅತ್ಯಾಧುನಿಕ ಹಾಗೂ ವೈಶಿಷ್ಟ್ಯ-ಸಮೃದ್ಧ, ಆದಾಗ್ಯೂ **ಸರಳೀಕೃತ ಮೊಬೈಲ್ ಮತ್ತು ಇಂಟರ್ನೆಟ್ ಬ್ಯಾಂಕಿಂಗ್ ಅಪ್ಲಿಕೇಶನ್.**

**ಪ್ರ: ಬ್ಯಾಂಕ್ ಈ ಹೊಸ ವ್ಯವಸ್ಥೆ/ಅಪ್ಲಿಕೇಶನನ್ನು ಏಕೆ ಪರಿಚಯಿಸುತ್ತಿದೆ?**

ಉ: ESAF ನ ಮಹತ್ವಾಕಾಂಕ್ಷೆಯು ದಿಟ್ಟ ಮತ್ತು ಸ್ಪಷ್ಟವಾಗಿದೆ: **ಭಾರತದಲ್ಲಿ "ವಿಶ್ವಾಸಾರ್ಹ", "ಗ್ರಾಹಕ ಕೇಂದ್ರಿತ", ಡಿಜಿಟಲ್ ಬ್ಯಾಂಕ್ ಆಗಿ ಹೊರಹೊಮ್ಮುವುದು.** ESAF ಈ ಕೆಳಗಿನ ಗುರಿಗಳನ್ನು ಹೊಂದಿದೆ:

- ನಾವು ನಮ್ಮ ಧ್ಯೇಯವಾಕ್ಯವಾಗಿರುವ ("Joy of Banking") **"ಬ್ಯಾಂಕಿಂಗ್‌ನಲ್ಲಿನ ಸಂತೋಷ"**ಕ್ಕೆ ಬದ್ಧರಾಗಿ ಕಾರ್ಯನಿರ್ವಹಿಸುವ ಮೂಲಕ, ಗ್ರಾಹಕರು ಎಲ್ಲಾ ಸಮಯಗಳಲ್ಲೂ ಅತ್ಯುತ್ತಮ ಉತ್ಪನ್ನಗಳು ಮತ್ತು ಸೇವೆಗಳನ್ನು ಪಡೆಯುವುದಾಗಿ ಖಚಿತಪಡಿಸಿಕೊಳ್ಳಲು ಬಯಸುತ್ತೇವೆ
- ಎಲ್ಲಾ ಚ್ಯಾನಲ್‌ಗಳಾದ್ಯಂತ **ಸ್ಥಿರವಾದ, ವೈಯಕ್ತೀಕರಿಸಿದ ಡಿಜಿಟಲ್ ಗ್ರಾಹಕ**

**ಪ್ರಯಾಣಗಳನ್ನು** ಒದಗಿಸುವುದು.

- ಅತ್ಯುತ್ತಮ ಶ್ರೇಣಿಯ ಕೊಡುಗೆಗಳ ಮೂಲಕ **ತ್ವರಿತ, ಸುರಕ್ಷಿತ, ಚೇತೋಹಾರಿ ಬ್ಯಾಂಕಿಂಗ್ ಅನುಭವವನ್ನು** ಒದಗಿಸುವುದು, ಹಾಗೂ ಅದರೊಂದಿಗೆ **ಭದ್ರವಾದ ಮತ್ತು ನಿಯಮಾವಳಿಗಳನ್ನು ಅನುಪಾಲಿಸುವ ಬ್ಯಾಂಕಿಂಗ್ ಅನುಭವ**ವನ್ನು ಖಚಿತಪಡಿಸುವುದು.

**ಪ್ರ: ಹೊಸ ಅಪ್ಲಿಕೇಶನ್ ಯಾವುದು?**

ಉ: **ಬದಲಾವಣೆಯ ಕೇಂದ್ರಭಾಗ: Flexcube CBS + ESAF CRM + ಡಿಜಿಟಲ್ ಆನ್‌ಬೋರ್ಡಿಂಗ್**

**ಅಪ್ಲಿಕೇಶನ್ + ಇಂಟರ್ನೆಟ್ ಮತ್ತು ಮೊಬೈಲ್ ಬ್ಯಾಂಕಿಂಗ್‌ನಂತಹ ಸ್ವಯಂ-ಸೇವಾ ಚ್ಯಾನಲ್‌ಗಳು**

## Oracle Flexcube Core Banking

Flexcube ಈ ಕೆಳಗಿನವುಗಳನ್ನು ಒದಗಿಸಲಿದೆ:

- ಗುಣಮಟ್ಟದ, ಆಧುನಿಕ ಗ್ರಾಹಕ ಜೀವನಚಕ್ರ ಮತ್ತು ಉತ್ಪನ್ನ ನಿರ್ವಹಣೆ
- ಉತ್ತಮ ಸಮೀಕರಣ ಸಾಮರ್ಥ್ಯಗಳು, ಇದು ತ್ವರಿತ ಆನ್‌ಬೋರ್ಡಿಂಗ್ ಮತ್ತು ಸಾಲ ವಿತರಣೆಯನ್ನು ಸಕ್ರಿಯಗೊಳಿಸುತ್ತದೆ
- ಇದು ಈ ವ್ಯವಸ್ಥೆಗೆ ಹೆಚ್ಚಿನ ಸ್ಥಿರತೆ, ವಿಸ್ತರಣಾ ಸಾಮರ್ಥ್ಯ ಮತ್ತು ದೃಢತೆ
- ನಿಯಂತ್ರಕ ನಿಯಮಾವಳಿಗಳ ಸುಧಾರಿತ ಅನುಪಾಲನೆ ಮತ್ತು ವರದಿ ನೀಡುವಿಕೆ

ಇದು ESAF ನ ಮುಂದಿನ ದಶಕದ ಬೆಳವಣಿಗೆಗಾಗಿ **ಪ್ರಧಾನ ಚಾಲಕಯಂತ್ರ**ವನ್ನು ರೂಪಿಸುತ್ತದೆ.

**ಇಂಟರ್ನೆಟ್ ಬ್ಯಾಂಕಿಂಗ್ ಮತ್ತು ಮೊಬೈಲ್ ಬ್ಯಾಂಕಿಂಗ್ ಚ್ಯಾನಲ್‌ಗಳು**

- ಗ್ರಾಹಕರಿಗಾಗಿ ಹಲವಾರು ಕಾರ್ಯಕ್ಷಮತೆಗಳನ್ನು ಹೊಂದಿರುವ ಹೊಸ ಪೀಳಿಗೆಯ ಚ್ಯಾನಲ್ ಪ್ಲ್ಯಾಟ್‌ಫಾರ್ಮ್
- ಇದು ಶಾಖೆಯೇ ನಿಮ್ಮ ಜೇಬಿನಲ್ಲಿರುವಂತೆ. ನೀವು ಮೊಬೈಲ್ ಆ್ಯಪನ್ನು ಬಳಸಿ ಖಾತೆಗೆ ಸಂಬಂಧಿಸಿದ ಕಾರ್ಯಾಚರಣೆಗಳನ್ನು ನಡೆಸಬಹುದು.
- ಬಿಲ್ ಪಾವತಿಗಳಂತಹ ತೃತೀಯ ಪಕ್ಷಗಳ ಸೇವೆಗಳು
- ಪಾವತಿಗಳ ಕಾರ್ಯಕ್ಷಮತೆಯನ್ನು ಹೆಚ್ಚು ವೇಗವಾಗಿ ಮತ್ತು ಸುರಕ್ಷಿತವಾಗಿರುವಂತೆ ಮಾಡಲಾಗಿದೆ

**ಪ್ರ: ಸೇವೆಗಳಲ್ಲಿ ಯಾವುದಾದರೂ ಅಡಚಣೆಗಳು ಇರುತ್ತವೆಯೇ?**

ಉ: *ಹೌದು. ಈ ಉನ್ನತೀಕರಣವನ್ನು ವಾರಾಂತ್ಯದಲ್ಲಿ (ಕಾರ್ಯ ನಿರ್ವಹಿಸದ ಶನಿವಾರ ಮತ್ತು ಭಾನುವಾರ) ಅನುಷ್ಠಾನಗೊಳಿಸಬೇಕೆಂದು ಯೋಜಿಸಲಾಗಿದೆ. ಉನ್ನತೀಕರಣ ಅವಧಿಯಲ್ಲಿ (23 ಅಕ್ಟೋಬರ್ 2026 ರಂದು ಸಂಜೆ 6 ರಿಂದ 26 ಅಕ್ಟೋಬರ್ 2026 ರ ಬೆಳಿಗ್ಗೆ 10 ರವರೆಗೆ), ಪಾವತಿ ಮತ್ತು ಚ್ಯಾನಲ್ ಸೇವೆಗಳು ಪ್ರಭಾವಿತಗೊಳ್ಳುತ್ತವೆ.*

**ಪ್ರ: ಕಟ್‌ಓವರ್ ಸಮಯದಲ್ಲಿ ಯಾವ ಸೇವೆಗಳು ಲಭ್ಯವಿರುವುದಿಲ್ಲ?**

ಉ: ವಲಸೆ / ಉನ್ನತೀಕರಣದ ಅವಧಿಯಲ್ಲಿ ಮೊಬೈಲ್ ಬ್ಯಾಂಕಿಂಗ್, ಇಂಟರ್ನೆಟ್ ಬ್ಯಾಂಕಿಂಗ್, ATM, UPI, QR Code, ಡೆಬಿಟ್ ಕಾರ್ಡ್ ಮತ್ತು ನಿಧಿ ವರ್ಗಾವಣೆಯ NEFT / RTGS / IMPS

ನಂತಹ ಎಲ್ಲಾ ಗ್ರಾಹಕ-ಮುಖಾಮುಖಿ ಚ್ಯಾನಲ್‌ಗಳು ಲಭ್ಯವಿರುವುದಿಲ್ಲ.

**ಪ್ರ: ಗ್ರಾಹಕನಾಗಿ ನನಗೆ ಈ ಬದಲಾವಣೆಯು ಯಾವ ಪ್ರಯೋಜನಗಳನ್ನು ತರುತ್ತದೆ?**

ಉ: ಸರಳೀಕೃತ ಆನ್‌ಬೋರ್ಡಿಂಗ್, ಖಾತೆ ತೆರೆಯುವಿಕೆ, ಸುಧಾರಿತ ಕಾರ್ಯಕ್ಷಮತೆಗಳೊಂದಿಗೆ ಸ್ವಯಂ-ಸೇವಾ ಚ್ಯಾನಲ್‌ಗಳು, ಸಂಪೂರ್ಣ ಡಿಜಿಟಲ್ ಮತ್ತು ತ್ವರಿತ ಸಾಲದ ಪ್ರಕ್ರಿಯೆ, ವೇಗವಾದ ಮತ್ತು ವೈಯಕ್ತೀಕರಿಸಲಾದ ಸೇವೆಗಳು ಮತ್ತು ಅನುಭವಗಳು, 24x7 ಡೇಟಾ ಲಭ್ಯತೆ, ಯಾವುದೇ ಸಮಯದಲ್ಲಿ ಪಾವತಿ ಆಯ್ಕೆಗಳು, ಇತ್ಯಾದಿ.

**ಪ್ರ: ಈ ಬದಲಾವಣೆಯು ಕಡ್ಡಾಯವೇ, ಅಥವಾ ನನಗೆ ಇತರೆ ಆಯ್ಕೆಗಳಿರುವವೇ?**

ಉ: ಇದು ಬ್ಯಾಂಕ್-ವ್ಯಾಪಿ ಸಿಸ್ಟಮ್ ಉನ್ನತೀಕರಣ ಆಗಿದ್ದು, ಎಲ್ಲಾ ಗ್ರಾಹಕರಿಗೆ ಸ್ವಯಂಚಾಲಿತವಾಗಿ ಅನ್ವಯಿಸುತ್ತದೆ. ಇದನ್ನು ನಮ್ಮ ಬ್ಯಾಂಕಿಂಗ್ ಸೇವೆಗಳನ್ನು ವರ್ಧಿಸಲು ಮತ್ತು ಅನ್ವಯವಾಗುವ ನಿಯಂತ್ರಕ ಅವಶ್ಯಕತೆಗಳನ್ನು ಪೂರೈಸಲೆಂದು ಕೈಗೊಳ್ಳಲಾಗುತ್ತಿದೆ. ಹೊಸ ಮೊಬೈಲ್ ಅಪ್ಲಿಕೇಶನನ್ನು ಅನುಸ್ಥಾಪಿಸುವುದು ಮತ್ತು ಮರು-ನೋಂದಾಯಿಸಿಕೊಳ್ಳುವುದನ್ನು ಹೊರತುಪಡಿಸಿ ನಿಮ್ಮ ಕಡೆಯಿಂದ ಯಾವುದೇ ಬೇರೆ ಕ್ರಮದ ಅಗತ್ಯವಿರುವುದಿಲ್ಲ.

**ಪ್ರ: ಈ ಬದಲಾವಣೆಯು ನನಗೆ ಯಾವುದೇ ವೆಚ್ಚವನ್ನು ಉಂಟುಮಾಡುತ್ತದೆಯೇ?**

ಉ: ಇಲ್ಲ. ಈ ಬದಲಾವಣೆಗಾಗಿ ನಿಮಗೆ ಯಾವುದೇ ವೆಚ್ಚಗಳಿರುವುದಿಲ್ಲ. ಈ ಉನ್ನತೀಕರಣವನ್ನು ನಿಮಗೆ ಸುಧಾರಿತ, ಹೆಚ್ಚು ತಡೆರಹಿತ ಬ್ಯಾಂಕಿಂಗ್ ಅನುಭವವನ್ನು ಒದಗಿಸಲೆಂದು ವಿನ್ಯಾಸಗೊಳಿಸಲಾಗಿದೆ.

**ಪ್ರ: ಈ ಬದಲಾವಣೆಯು ಎಲ್ಲಾ ಗ್ರಾಹಕರ ಮೇಲೆ ಪರಿಣಾಮ ಬೀರುತ್ತದೆಯೇ ಅಥವಾ ಕೆಲವರ ಮೇಲೆ ಮಾತ್ರವೇ?**

*ಉ: ಬ್ಯಾಂಕಿನ ಎಲ್ಲಾ ಅಸ್ತಿತ್ವದಲ್ಲಿರುವ ಗ್ರಾಹಕರು.*

**ಪ್ರ: ನನ್ನ ಶಾಖೆಯ ಸೇವೆಗಳು ಮತ್ತು ಬೆಂಬಲದ ಸೇವೆಗಳ ಮೇಲೆ ಪರಿಣಾಮವಾಗುತ್ತದೆಯೇ?**

*ಉ: ನಿಮ್ಮ ಶಾಖೆಯು ನೀವು ಪ್ರಸ್ತುತ ಪಡೆಯುತ್ತಿರುವ ಸೇವೆಗಳು ಮತ್ತು ಬೆಂಬಲಗಳನ್ನು ಮುಂದುವರಿಸುತ್ತದೆ. ಈ ಉನ್ನತೀಕೃತ ಸಿಸ್ಟಮ್ ನಿಮಗೆ ಹೆಚ್ಚು ಪರಿಣಾಮಕಾರಿಯಾಗಿ ಸೇವೆ ಸಲ್ಲಿಸಲು ಮತ್ತು ನಿಮ್ಮ ಒಟ್ಟಾರೆ ಬ್ಯಾಂಕಿಂಗ್ ಅನುಭವವನ್ನು ವರ್ಧಿಸಲು ಸಹಾಯ ಮಾಡುವುದಕ್ಕಾಗಿ ವಿನ್ಯಾಸಗೊಳಿಸಲಾಗಿದೆ.*

**ಪ್ರ: ಈ ಸಮಯದಲ್ಲಿ ನನಗೆ ತುರ್ತು ವಹಿವಾಟಿನ ಅಗತ್ಯವಿದ್ದರೆ ನಾನು ಏನು ಮಾಡಬೇಕು?**

*ಉ: ದಯವಿಟ್ಟು ಎಲ್ಲಾ ತುರ್ತು ವಹಿವಾಟುಗಳು, ನಿಧಿ ವರ್ಗಾವಣೆಗಳು, ಬಿಲ್ ಪಾವತಿಗಳು ಮತ್ತು ಅಗತ್ಯ ನಗದು ಹಿಂಪಡೆಯುವಿಕೆಗಳನ್ನು **23 ಅಕ್ಟೋಬರ್ 2026 ರ ಸಂಜೆ 6:00 ಗಂಟೆಯೊಳಗೆ** ಪೂರ್ಣಗೊಳಿಸಿ. ಸಿಸ್ಟಮ್ ಉನ್ನತೀಕರಣದ ಸಮಯದಲ್ಲಿ ನಮ್ಮ ಪಾವತಿ ಮತ್ತು ಬ್ಯಾಂಕಿಂಗ್ ಚ್ಯಾನಲ್‌ಗಳು ತಾತ್ಕಾಲಿಕವಾಗಿ ಲಭ್ಯವಿರುವುದಿಲ್ಲವಾದ್ದರಿಂದ, ಪರ್ಯಾಯ ಪಾವತಿ ಆಯ್ಕೆಯನ್ನು ಲಭ್ಯವಿರಿಸಿಕೊಳ್ಳಲು ನಾವು ಶಿಫಾರಸು ಮಾಡುತ್ತೇವೆ. ಈ ಅನಾನುಕೂಲತೆಗಾಗಿ ನಾವು ವಿಷಾದಿಸುತ್ತೇವೆ ಹಾಗೂ ನಿಮ್ಮ ವಹಿವಾಟುಗಳನ್ನು ಮುಂಚಿತವಾಗಿಯೇ ಯೋಜಿಸಲು ವಿನಂತಿಸುತ್ತೇವೆ.*

**ಪ್ರ: ಸಾಮಾನ್ಯ ಸೇವೆಗಳು ಯಾವಾಗ ಪುನರಾರಂಭಗೊಳ್ಳುತ್ತವೆ?**

*ಉ: 26 ಅಕ್ಟೋಬರ್ 2026 ರ ಬೆಳಿಗ್ಗೆ 10 ಗಂಟೆಯಿಂದ*

**ಪ್ರ: ಡೌನ್‌ಟೈಮ್ ಬಗ್ಗೆ ನನಗೆ ಮುಂಚಿತವಾಗಿ ತಿಳಿಸಲಾಗುತ್ತದೆಯೇ?**

*ಉ: ಹೌದು. ನಿಗದಿತ ಡೌನ್‌ಟೈಮ್‌ನ ವಿವರಗಳು ಮತ್ತು ಇತ್ತೀಚಿನ ಪರಿಷ್ಕರಣೆಗಳು ಬ್ಯಾಂಕಿನ ಅಧಿಕೃತ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತವೆ. ನಾವು SMS ಮತ್ತು ಬ್ಯಾಂಕ್‌ನ ಇತರ ಅಧಿಕೃತ ಚ್ಯಾನಲ್‌ಗಳ ಮೂಲಕವೂ ಸಂವಹನ ಮಾಡುತ್ತೇವೆ. ಈ ಅವಧಿಯಲ್ಲಿ ಯಾವುದೇ ವಹಿವಾಟನ್ನು ಯೋಜಿಸುವ ಮೊದಲು ವೆಬ್‌ಸೈಟನ್ನು ಪರಿಶೀಲಿಸುವಂತೆ ನಾವು ಗ್ರಾಹಕರನ್ನು ವಿನಂತಿಸುತ್ತೇವೆ.*

**ಪ್ರ: ಸಿಸ್ಟಮ್ ಡೌನ್ ಆದಾಗ ವಹಿವಾಟು ಪ್ರಕ್ರಿಯೆಯಲ್ಲಿದ್ದರೆ ಏನಾಗುತ್ತದೆ?**

ಉ: ಅಪೂರ್ಣ ವಹಿವಾಟುಗಳು ಪ್ರಕ್ರಿಯೆಗೊಳ್ಳುವುದಿಲ್ಲ. ಹೆಚ್ಚಿನ ಸಹಾಯಕ್ಕಾಗಿ, ದಯವಿಟ್ಟು ನಮ್ಮ ಅಧಿಕೃತ ಗ್ರಾಹಕ ನೆರವು ಚ್ಯಾನಲ್‌ಗಳ ಮೂಲಕ ಬ್ಯಾಂಕನ್ನು ಸಂಪರ್ಕಿಸಿ.

# 3 ನನ್ನ ಬ್ಯಾಂಕಿಂಗ್ ಮೇಲಿನ ಪರಿಣಾಮ

## 3.1 ಖಾತೆ ಮತ್ತು ಗ್ರಾಹಕರ ಮಾಹಿತಿ

**ಪ್ರ: ನನ್ನ ಖಾತೆಯ ಸಂಖ್ಯೆಯು ಬದಲಾಗುತ್ತದೆಯೇ?**

ಉ: *ಇಲ್ಲ, ಖಾತೆಯು ಸಂಖ್ಯೆಯು ಹಾಗೆಯೇ ಇರುತ್ತದೆ*

**ಪ್ರ: ನನ್ನ ಗ್ರಾಹಕರ ID ಬದಲಾಗುತ್ತದೆಯೇ?**

ಉ: ಹೌದು. ಹೌದು, ಹೊಸ ಗ್ರಾಹಕರ IDಯನ್ನು ರಚಿಸಲಾಗುತ್ತದೆ ಹಾಗೂ ಉನ್ನತೀಕೃತ ಸಿಸ್ಟಮ್‌ನಲ್ಲಿ ನಿಮ್ಮ ಅಸ್ತಿತ್ವದಲ್ಲಿರುವ ಗ್ರಾಹಕರ ID ಮತ್ತು ಖಾತೆಗಳಿಗೆ ಸ್ವಯಂಚಾಲಿತವಾಗಿ ಸಂಯೋಜಿಸಲಾಗುತ್ತದೆ. ಇದು ನಿಮ್ಮ ಖಾತೆಯ ಬ್ಯಾಲೆನ್ಸ್ ಅಥವಾ ಬ್ಯಾಂಕ್‌ನೊಂದಿಗಿನ ಸಂಬಂಧದ ಮೇಲೆ ಪರಿಣಾಮ ಬೀರುವುದಿಲ್ಲ ಮತ್ತು ನಿಮ್ಮ ಕಡೆಯಿಂದ ಯಾವುದೇ ಕ್ರಮದ ಅಗತ್ಯವಿರುವುದಿಲ್ಲ. ಉನ್ನತೀಕರಣದ ನಂತರ, ನೀವು ಬ್ಯಾಂಕಿನ ಅಧಿಕೃತ ಗ್ರಾಹಕ ನೆರವು ಚ್ಯಾನಲ್‌ಗಳ ಮೂಲಕ ಅಥವಾ ಅಗತ್ಯವಿರುವ ಗುರುತಿನ ಪುರಾವೆಗಳೊಂದಿಗೆ ನಿಮ್ಮ ಹತ್ತಿರದ ಶಾಖೆಗೆ ಭೇಟಿ ನೀಡುವ ಮೂಲಕ ನಿಮ್ಮ ಹೊಸ ಗ್ರಾಹಕರ IDಯನ್ನು ಪಡೆಯಬಹುದು.

**ಪ್ರ: ನನ್ನ ನೋಂದಾಯಿತ ಮೊಬೈಲ್ ಸಂಖ್ಯೆ ಮತ್ತು ಇಮೇಲ್ ನನ್ನ ಖಾತೆಯೊಂದಿಗೆ ಲಿಂಕ್ ಸಂಯೋಜಿತವಾಗಿರುತ್ತವೆಯೇ?**

ಉ: *ಹೌದು*

**ಪ್ರ: ನನ್ನ ಶಾಖೆಯ IFSC ಕೋಡ್ ಬದಲಾಗುತ್ತದೆಯೇ?**

ಉ: ಇಲ್ಲ, ಎಲ್ಲಾ ಶಾಖೆಗಳ IFSC ಕೋಡ್‌ಗಳು ಹಾಗೆಯೇ ಇರುತ್ತವೆ

**ಪ್ರ: ನನ್ನ ನಾಮನಿರ್ದೇಶಿತರ ವಿವರಗಳು ಸ್ವಯಂಚಾಲಿತವಾಗಿ ಮುಂದುವರಿಯುತ್ತವೆಯೇ?**

ಉ: *ಹೌದು*

**ಪ್ರ: ಬದಲಾವಣೆಯ ನಂತರ ನನ್ನ ವಹಿವಾಟಿನ ಇತಿಹಾಸ ಲಭ್ಯವಿರುತ್ತದೆಯೇ?**

*ಉ: ಹೌದು, ಉನ್ನತೀಕೃತ ಸಿಸ್ಟಮ್‌ನಲ್ಲಿ 1 ಏಪ್ರಿಲ್ 2025 ರಿಂದ ನಂತರದ ನಿಮ್ಮ ವಹಿವಾಟಿನ ಇತಿಹಾಸ ಲಭ್ಯವಿರುತ್ತದೆ. ನಿಮಗೆ 1 ಏಪ್ರಿಲ್ 2025 ಕ್ಕಿಂತ ಮೊದಲಿನ ಯಾವುದೇ ಅವಧಿಯ ವಹಿವಾಟು ವಿವರಗಳು ಅಥವಾ ಖಾತೆಯ ಹೇಳಿಕೆಗಳು ಅಗತ್ಯವಿದ್ದರೆ, ದಯವಿಟ್ಟು ಸಹಾಯಕ್ಕಾಗಿ ನಿಮ್ಮ ಹತ್ತಿರದ ಶಾಖೆಯನ್ನು ಸಂಪರ್ಕಿಸಿ.*

**ಪ್ರ: ಪರಿವರ್ತನೆಯ ನಂತರ ನಾನು ನನ್ನ KYC ದಾಖಲೆಗಳನ್ನು ಮತ್ತೆ ಸಲ್ಲಿಸಬೇಕೇ?**

*ಉ: ಇಲ್ಲ, ಎಲ್ಲಾ KYC ಮಾಹಿತಿಯು ಹೊಸ ಸಿಸ್ಟಮ್‌ಗೆ ವಲಸೆಯಾಗುತ್ತದೆ. ಆದಾಗ್ಯೂ, ನಿಮ್ಮ ಖಾತೆಗಾಗಿ ನಿಯತಕಾಲಿಕ re-KYC ಸಲ್ಲಿಸುವ ಸಮಯ ಬಂದಾಗ, ಅನ್ವಯವಾಗುವ ನಿಯಂತ್ರಕ ಅವಶ್ಯಕತೆಗಳಿಗೆ ಅನುಗುಣವಾಗಿ ನೀವು ಅಗತ್ಯವಿರುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕಾಗುತ್ತದೆ.*

**ಪ್ರ: ನೆಟ್‌ಬ್ಯಾಂಕಿಂಗ್ ಮೂಲಕ ಪ್ರಪತ್ರ 121 ಅನ್ನು ಪರಿಷ್ಕರಿಸುವ ಹಕ್ಕು ಗ್ರಾಹಕರಿಗೆ ಸಿಗುತ್ತದೆಯೇ?**

*ಉ: ಸಿಸ್ಟಮ್ ಲೈವ್ ಆದ ತಕ್ಷಣ ಈ ಸೌಲಭ್ಯವು ಇಂಟರ್ನೆಟ್ ಬ್ಯಾಂಕಿಂಗ್ ಮೂಲಕ ಲಭ್ಯವಿರುವುದಿಲ್ಲ. ಇದನ್ನು ನಂತರದಲ್ಲಿ ಪರಿಚಯಿಸಲು ಯೋಜಿಸಲಾಗಿದೆ. ಅಲ್ಲಿಯವರೆಗೆ, ಪ್ರಪತ್ರ 121 ಅನ್ನು ಪರಿಷ್ಕರಿಸಲು ಸಹಾಯಕ್ಕಾಗಿ ದಯವಿಟ್ಟು ನಿಮ್ಮ ಹತ್ತಿರದ ಶಾಖೆಗೆ ಭೇಟಿ ನೀಡಿ.*

**ಪ್ರ: ನನ್ನ ಅಸ್ತಿತ್ವದಲ್ಲಿರುವ ಉತ್ಪನ್ನಗಳು ಮತ್ತು ಸೇವೆಗಳು ಬದಲಾಗುತ್ತವೆಯೇ?**

*ಸಂ. ಇಲ್ಲ. ಸಿಸ್ಟಮ್ ಉನ್ನತೀಕರಣದ ನಂತರ ನಿಮ್ಮ ಅಸ್ತಿತ್ವದಲ್ಲಿರುವ ಉತ್ಪನ್ನಗಳು ಮತ್ತು ಸೇವೆಗಳು ಮುಂದುವರಿಯುತ್ತವೆ. ಯಾವುದೇ ಆಂತರಿಕ ಸಿಸ್ಟಮ್-ಸಂಬಂಧಿತ ಬದಲಾವಣೆಗಳನ್ನು ಬ್ಯಾಂಕ್ ನಿರ್ವಹಿಸುತ್ತದೆ ಹಾಗೂ ನಿಮ್ಮಿಂದ ಯಾವುದೇ ಕ್ರಮದ ಅಗತ್ಯವಿರುವುದಿಲ್ಲ.*

**ಪ್ರ: ನಾನು ಯಾವುದೇ ಸೇವೆಗಾಗಿ ಮತ್ತೆ ನೋಂದಾಯಿಸಿಕೊಳ್ಳಬೇಕೇ?**

*ಉ: ಅಸ್ತಿತ್ವದಲ್ಲಿರುವ ಸೇವೆಗಳು ಮುಂದುವರಿಯುತ್ತವೆ. ನೀವು ಹೊಸ ಮೊಬೈಲ್ ಅಪ್ಲಿಕೇಶನ್‌ಗಾಗಿ ಮರು-ನೋಂದಾಯಿಸಿಕೊಳ್ಳಬೇಕಾಗುತ್ತದೆ.*

**ಪ್ರ: ನನ್ನ ಪಾಸ್‌ಬುಕ್ ಬದಲಾಯಿಸಬೇಕೇ?**

ಉ: ಇಲ್ಲ, ನೀವು ಅದೇ ಪಾಸ್‌ಬುಕನ್ನು ಮುಂದುವರಿಸಬಹುದು

**ಪ್ರ: ಸಿಸ್ಟಮ್ ಉನ್ನತೀಕರಣದ ಸಮಯದಲ್ಲಿ ನನ್ನ ESAF ಖಾತೆಗೆ ಹಣ ಜಮಾ ಮಾಡಬಹುದೇ?**

ಉ: ಇಲ್ಲ, ಏಕೆಂದರೆ ಸಿಸ್ಟಮ್ ಲಭ್ಯವಿರುವುದಿಲ್ಲ

**ಪ್ರ: ಸೇವಾ ಅಡಚಣೆಯ ಸಮಯದಲ್ಲಿ ಬರುವ ನನ್ನ ಸಂಬಳ ಅಥವಾ ಪಿಂಚಣಿ ಜಮೆಯಾಗುತ್ತದೆಯೇ?**

ಉ: ಇಲ್ಲ, ಏಕೆಂದರೆ ಸಿಸ್ಟಮ್ ಲಭ್ಯವಿರುವುದಿಲ್ಲ

**ಪ್ರ: ಸಿಸ್ಟಮ್ ಉನ್ನತೀಕರಣದ ಸಮಯದಲ್ಲಿ ಸರ್ಕಾರದ ಪ್ರಯೋಜನಗಳು/DBT ಜಮೆಗಳ**

**ಮೇಲೆ ಪರಿಣಾಮ ಆಗುತ್ತದೆಯೇ?**

ಉ: ಇಲ್ಲ, ಏಕೆಂದರೆ ಸಿಸ್ಟಮ್ ಲಭ್ಯವಿರುವುದಿಲ್ಲ

### 3.2 ಮೊಬೈಲ್ ಬ್ಯಾಂಕಿಂಗ್ ಮತ್ತು ಇಂಟರ್ನೆಟ್ ಬ್ಯಾಂಕಿಂಗ್

**ಪ್ರ: ಮೊಬೈಲ್ ಬ್ಯಾಂಕಿಂಗ್ ಮೇಲೆ ಪರಿಣಾಮ ಆಗುತ್ತದೆಯೇ?**

*ಉ: ಉನ್ನತೀಕರಣದ ಅವಧಿಯಲ್ಲಿ, ಅಸ್ತಿತ್ವದಲ್ಲಿರುವ ಮೊಬೈಲ್ ಬ್ಯಾಂಕಿಂಗ್ ಸೇವೆಗಳು ಲಭ್ಯವಿರುವುದಿಲ್ಲ.*

**ಪ್ರ: ಮೊಬೈಲ್ ಬ್ಯಾಂಕಿಂಗ್‌ನಲ್ಲಿ ಏನಾದರೂ ಬದಲಾವಣೆ ಇರುತ್ತದೆಯೇ**

ಉ: 26 ಅಕ್ಟೋಬರ್ ರಂದು ಗೋ ಲೈವ್ ಆದ ನಂತರ, ಹೊಸ ಮೊಬೈಲ್ ಬ್ಯಾಂಕಿಂಗ್ ಅಪ್ಲಿಕೇಶನ್ ಸುಧಾರಿತ ವೈಶಿಷ್ಟ್ಯಗಳೊಂದಿಗೆ ಲಭ್ಯವಿರುತ್ತದೆ.

**ಪ್ರ: E_Mitra ಆ್ಯಪ್‌ನಲ್ಲಿ ಏನಾದರೂ ಬದಲಾವಣೆ ಇರುತ್ತದೆಯೇ**

ಉ: ಹೌದು. ಹೌದು. ಹೊಸ ಮೊಬೈಲ್ ಬ್ಯಾಂಕಿಂಗ್ ಅಪ್ಲಿಕೇಶನನ್ನು ವರ್ಧಿತ ವೈಶಿಷ್ಟ್ಯಗಳೊಂದಿಗೆ ಪರಿಚಯಿಸಲಾಗುತ್ತದೆ. ಉನ್ನತೀಕರಣದ ನಂತರ ನೀವು ಅಸ್ತಿತ್ವದಲ್ಲಿರುವ ಅಪ್ಲಿಕೇಶನನ್ನು ತೆರೆದಾಗ, ಅನ್ವಯವಾಗುವಂತೆ Google Play Store ಅಥವಾ Apple App Store ನಿಂದ ಹೊಸ ಆ್ಯಪನ್ನು ಡೌನ್‌ಲೋಡ್ ಮಾಡಲು ನಿಮಗೆ ಮಾರ್ಗದರ್ಶನ ನೀಡಲಾಗುತ್ತದೆ.

**ಪ್ರ: ನಾನು ಹೊಸ ಆ್ಯಪನ್ನು ಡೌನ್‌ಲೋಡ್ ಮಾಡಬೇಕೇ ಅಥವಾ ನನ್ನಲ್ಲಿರುವ ಆ್ಯಪನ್ನು ಉನ್ನತೀಕರಿಸಬೇಕೇ?**

ಉ: *ಹೌದು, MB ಹೊಸ ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು.* ಕಟ್‌ಓವರ್ ಅವಧಿಯ ನಂತರ, ನೀವು ಅಸ್ತಿತ್ವದಲ್ಲಿರುವ MB ಆ್ಯಪನ್ನು ಪ್ರವೇಶಿಸಿದಾಗ, ಅದು ಮರುನಿರ್ದೇಶಿಸಲ್ಪಡುತ್ತದೆ. ಲಿಂಕನ್ನು ಕ್ಲಿಕ್ ಮಾಡಿದ ನಂತರ, ಹೊಸ ಮೊಬೈಲ್ ಬ್ಯಾಂಕಿಂಗ್ ಅಪ್ಲಿಕೇಶನನ್ನು ಡೌನ್‌ಲೋಡ್ ಮಾಡಲು ಬಳಕೆದಾರರನ್ನು Play Storeಗೆ ಮರುನಿರ್ದೇಶಿಸಲಾಗುತ್ತದೆ.

**ಪ್ರ: ಇಂಟರ್ನೆಟ್ ಬ್ಯಾಂಕಿಂಗ್ ಮೇಲೆ ಪರಿಣಾಮ ಆಗುತ್ತದೆಯೇ?**

*ಉ: ಉನ್ನತೀಕರಣದ ಅವಧಿಯಲ್ಲಿ, ಅಸ್ತಿತ್ವದಲ್ಲಿರುವ ಇಂಟರ್ನೆಟ್ ಬ್ಯಾಂಕಿಂಗ್ ಸೇವೆಗಳು ಲಭ್ಯವಿರುವುದಿಲ್ಲ.*

**ಪ್ರ: ವಲಸೆಯ ಸಮಯದಲ್ಲಿ ಮೊಬೈಲ್ ಬ್ಯಾಂಕಿಂಗ್ ಮತ್ತು ಇಂಟರ್ನೆಟ್ ಬ್ಯಾಂಕಿಂಗ್‌ಗಾಗಿ ನಾನು ಎಷ್ಟು ಸಮಯದ ಡೌನ್‌ಟೈಮ್ ಅನ್ನು ನಿರೀಕ್ಷಿಸಬೇಕು?**

ಉ: *23 ಅಕ್ಟೋಬರ್ 2026 ರಂದು ಸಂಜೆ 6 ರಿಂದ ಪ್ರಾರಂಭವಾಗುತ್ತದೆ ಹಾಗೂ 26 ಅಕ್ಟೋಬರ್ 2026 ರ ಬೆಳಿಗ್ಗೆ 10 ರವರೆಗೆ ಇರುತ್ತದೆ. ಇದರಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ, ನಾವು ನಿಮಗೆ ತಿಳಿಸುತ್ತೇವೆ.*

**ಪ್ರ: ಇಂಟರ್ನೆಟ್ ಬ್ಯಾಂಕಿಂಗ್‌ನಲ್ಲಿ ಏನಾದರೂ ಬದಲಾವಣೆ ಇರುತ್ತದೆಯೇ**

**ಉ:** *ಉನ್ನತೀಕರಣದ ನಂತರ, ಗ್ರಾಹಕರು ಇಂಟರ್ನೆಟ್ ಬ್ಯಾಂಕಿಂಗ್ ಅಪ್ಲಿಕೇಶನನ್ನು ಪ್ರವೇಶಿಸಬಹುದು, ಅದು ಹೊಸ ಇಂಟರ್ನೆಟ್ ಬ್ಯಾಂಕಿಂಗ್ ಅಪ್ಲಿಕೇಶನ್‌ಗೆ ಮರುನಿರ್ದೇಶಿಸಲ್ಪಡುತ್ತದೆ. ನೀವು ಪಾಸ್‌ವರ್ಡ್ ಅನ್ನು ಮರುಹೊಂದಿಸಬೇಕಾಗುತ್ತದೆ.*

**ಪ್ರ: ಪರಿವರ್ತನೆಯ ಅವಧಿಯಲ್ಲಿ ನಾನು (MB/IB/ಶಾಖೆಯ ಮೂಲಕ) FD ಗಳನ್ನು ತೆರೆಯಲು/ಮುಚ್ಚಲು ಸಾಧ್ಯವೇ?**

ಉ: ಇಲ್ಲ. ನಿಗದಿತ ಸಿಸ್ಟಮ್ ಉನ್ನತೀಕರಣದ ಅವಧಿಯಲ್ಲಿ ಮೊಬೈಲ್ ಬ್ಯಾಂಕಿಂಗ್, ಇಂಟರ್ನೆಟ್ ಬ್ಯಾಂಕಿಂಗ್ ಅಥವಾ ಶಾಖೆಗಳ ಮೂಲಕ ಪೂರ್ವಾವಧಿ ಖಾತೆಯ ಮುಚ್ಚುವಿಕೆ ಸೇರಿದಂತೆ ಸ್ಥಿರ ಠೇವಣಿಗಳನ್ನು ತೆರೆಯುವುದು ಮತ್ತು ಮುಚ್ಚುವುದು ಲಭ್ಯವಿರುವುದಿಲ್ಲ. ದಯವಿಟ್ಟು ಯಾವುದೇ ತುರ್ತು ಸ್ಥಿರ ಠೇವಣಿ-ಸಂಬಂಧಿತ ವಹಿವಾಟುಗಳನ್ನು 23 ಅಕ್ಟೋಬರರ ಸಂಜೆ 6:00 ಗಂಟೆಯ ಮೊದಲು ಅಥವಾ ಬ್ಯಾಂಕಿಂಗ್ ಸೇವೆಗಳು ಪುನರಾರಂಭಗೊಂಡ ನಂತರ ಪೂರ್ಣಗೊಳಿಸಿ.

**ಪ್ರ: ನನ್ನ ಅಸ್ತಿತ್ವದಲ್ಲಿರುವ ಇಂಟರ್ನೆಟ್ ಬ್ಯಾಂಕಿಂಗ್/ಮೊಬೈಲ್ ಬ್ಯಾಂಕಿಂಗ್ ಲಾಗಿನ್ ರುಜುವಾತುಗಳು ಕೆಲಸ ಮಾಡುವುದನ್ನು ಮುಂದುವರಿಸುತ್ತವೆಯೇ, ಅಥವಾ ನಾನು ಮತ್ತೆ ನೋಂದಾಯಿಸಿಕೊಳ್ಳಬೇಕೇ?**

*ಉ: ಇಲ್ಲ. ವರ್ಧಿತ ಸುರಕ್ಷತೆ ಮತ್ತು ಭದ್ರತೆಗಾಗಿ ನೀವು ಲಾಗಿನ್ ರುಜುವಾತುಗಳನ್ನು ಮರು-ನೋಂದಾಯಿಸಿಕೊಳ್ಳಬೇಕು.*

**ಪ್ರ: ಪರಿವರ್ತನೆಯ ನಂತರ ನಾನು ನನ್ನ ಪಾಸ್‌ವರ್ಡ್ ಅಥವಾ MPIN ಅನ್ನು ಮರುಹೊಂದಿಸಬೇಕೇ?**

*ಉ: ನೀವು ಮರು-ನೋಂದಾಯಿಸಿಕೊಳ್ಳಬೇಕು*

**ಪ್ರ: ನನ್ನ ಎಲ್ಲಾ ಖಾತೆಗಳು ಮತ್ತು ಬ್ಯಾಂಕಿಂಗ್ ಸಂಬಂಧಗಳು ಹೊಸ ಡಿಜಿಟಲ್ ಪ್ಲಾಟ್‌ಫಾರ್ಮ್‌ನಲ್ಲಿ ಗೋಚರಿಸುತ್ತವೆಯೇ?**

*ಉ:* ಹೌದು, ಹೊಸ ಪ್ಲಾಟ್‌ಫಾರ್ಮ್/ಅಪ್ಲಿಕೇಶನ್‌ನಲ್ಲಿ ಲಭ್ಯವಿರುತ್ತದೆ

**ಪ್ರ: ನನ್ನ ಅಸ್ತಿತ್ವದಲ್ಲಿರುವ ಫಲಾನುಭವಿಗಳು ಲಭ್ಯವಿರುತ್ತಾರೆಯೇ, ಅಥವಾ ನಾನು ಅವರನ್ನು ಮತ್ತೆ ನೋಂದಾಯಿಸಬೇಕೇ?**

ಉ: ಹೌದು, ತಡೆರಹಿತ ಮತ್ತು ತೊಂದರೆ-ರಹಿತ ಪರಿವರ್ತನೆಯನ್ನು ಖಚಿತಪಡಿಸಿಕೊಳ್ಳಲು, ಅಸ್ತಿತ್ವದಲ್ಲಿರುವ ಎಲ್ಲಾ ಫಲಾನುಭವಿಗಳು ಹೊಸ ಪ್ಲಾಟ್‌ಫಾರ್ಮ್/ಅಪ್ಲಿಕೇಶನ್‌ನಲ್ಲಿ ಲಭ್ಯವಿರುತ್ತಾರೆ. ಅಸ್ತಿತ್ವದಲ್ಲಿರುವ ಫಲಾನುಭವಿಗಳಿಗಾಗಿ ಮತ್ತೆ ನೋಂದಾಯಿಸುವ ಅಗತ್ಯವಿರುವುದಿಲ್ಲ.

**ಪ್ರ: ಮೊಬೈಲ್ ಬ್ಯಾಂಕಿಂಗ್ ಮೂಲಕ ನಾನು ಸೇವಾ ವಿನಂತಿಗಳನ್ನು ಸಲ್ಲಿಸಬಹುದೇ?**

ಉ: ಹೌದು, ಉನ್ನತೀಕರಣ ಅವಧಿಯ ನಂತರ ಹೊಸ ಅಪ್ಲಿಕೇಶನ್‌ನಲ್ಲಿ ಸಲ್ಲಿಸಬಹುದು

**ಪ್ರ: ಮೊಬೈಲ್ ಬ್ಯಾಂಕಿಂಗ್ ಮತ್ತು ಇಂಟರ್ನೆಟ್ ಬ್ಯಾಂಕಿಂಗ್ ಮೂಲಕ ಕ್ರೆಡಿಟ್ ಕಾರ್ಡ್ ವಿವರಗಳು ಲಭ್ಯವಿರುತ್ತವೆಯೇ?**

ಉ: ಇಲ್ಲ, ನಿಮ್ಮಲ್ಲಿರುವ ಕ್ರೆಡಿಟ್ ಕಾರ್ಡ್‌ನ ವಿವರಗಳನ್ನು ವೀಕ್ಷಿಸಲು ನೀವು ಕ್ರೆಡಿಟ್ ಕಾರ್ಡ್ ಬ್ಯಾಂಕಿಂಗ್ ಪೋರ್ಟಲ್‌ಗೆ ಭೇಟಿ ನೀಡಬೇಕಾಗುತ್ತದೆ. ನಾವು MB & IB ಯಲ್ಲಿ CC ಲಭ್ಯತೆಯ ಕುರಿತು ನಂತರದ ದಿನಾಂಕದಲ್ಲಿ ನಿಮಗೆ ತಿಳಿಸುತ್ತೇವೆ.

**ಪ್ರ: ಮೊಬೈಲ್ ಬ್ಯಾಂಕಿಂಗ್ ಅಥವಾ ಇಂಟರ್ನೆಟ್ ಬ್ಯಾಂಕಿಂಗ್ ಮೂಲಕ ನಾನು ಠೇವಣಿ**

**ಆಧಾರಿತ ಸಾಲವನ್ನು (LAD) ಪಡೆಯಬಹುದೇ?**

ಉ: ಇದು ಪ್ರಸ್ತುತ ಈ ಚ್ಯಾನಲ್‌ಗಳಲ್ಲಿ ಲಭ್ಯವಿಲ್ಲ, ಈ ವೈಶಿಷ್ಟ್ಯವನ್ನು ಸೇರಿಸಿದ ನಂತರ ನಾವು ನಿಮಗೆ ತಿಳಿಸುತ್ತೇವೆ.

**ಪ್ರ: ನಾನು ನನ್ನ CASA ಖಾತೆಯಿಂದ ನನ್ನ ಸಾಲದ ಖಾತೆಗೆ ಹಣವನ್ನು ಮೊಬೈಲ್ ಬ್ಯಾಂಕಿಂಗ್ ಅಥವಾ ಇಂಟರ್ನೆಟ್ ಬ್ಯಾಂಕಿಂಗ್ ಮೂಲಕ ವರ್ಗಾಯಿಸಬಹುದೇ?**

ಉ: ಹೌದು, ಗೋ ಲೈವ್‌ನ ನಂತರ ಹೊಸ ಅಪ್ಲಿಕೇಶನ್‌ನಲ್ಲಿ ಮಾಡಬಹುದು

**ಪ್ರ: ಗ್ರಾಹಕರು ನೆಟ್‌ಬ್ಯಾಂಕಿಂಗ್ ಮೂಲಕ ಮೊಬೈಲ್ ಸಂಖ್ಯೆ/ಇಮೇಲ್ IDಯನ್ನು ಬದಲಾಯಿಸಬಹುದೇ?**

ಉ: ನೀವು ಗೋ ಲೈವ್‌ನ ನಂತರ ಇಂಟರ್ನೆಟ್ ಬ್ಯಾಂಕಿಂಗ್ ಅಥವಾ ಮೊಬೈಲ್ ಬ್ಯಾಂಕಿಂಗ್ ಮೂಲಕ ನಿಮ್ಮ ನೋಂದಾಯಿತ ಇಮೇಲ್ ವಿಳಾಸವನ್ನು ಪರಿಷ್ಕರಿಸಬಹುದು. ನಿಮ್ಮ ನೋಂದಾಯಿತ ಮೊಬೈಲ್ ಸಂಖ್ಯೆಯನ್ನು ಬದಲಾಯಿಸಲು, ದಯವಿಟ್ಟು ಅಗತ್ಯವಿರುವ ಗುರುತಿನ ದಾಖಲೆಗಳೊಂದಿಗೆ ನಿಮ್ಮ ಹತ್ತಿರದ ಶಾಖೆಗೆ ಭೇಟಿ ನೀಡಿ

**ಪ್ರ: ಹೊಸ ಮೊಬೈಲ್ ಬ್ಯಾಂಕಿಂಗ್ ಅಪ್ಲಿಕೇಶನ್ Android ಮತ್ತು iPhone ಬಳಕೆದಾರರಿಬ್ಬರಿಗೂ ಲಭ್ಯವಿರುತ್ತದೆಯೇ?**

ಉ: ಹೌದು, ಇದು Android ಮತ್ತು iPhone ಬಳಕೆದಾರರಿಬ್ಬರಿಗೂ ಲಭ್ಯವಿರುತ್ತದೆ

## 3.3 ಚೆಕ್, ಪಾವತಿಗಳು ಮತ್ತು ವರ್ಗಾವಣೆ

**ಪ್ರ: ನಿಧಿ ವರ್ಗಾವಣೆಗಳ (NEFT/RTGS/IMPS) ಮೇಲೆ ಪರಿಣಾಮ ಆಗುತ್ತದೆಯೇ?**

*ಉ: ಹೌದು, ಉನ್ನತೀಕರಣದ ಅವಧಿಯಲ್ಲಿ ಈ ಸೇವೆಗಳು ಲಭ್ಯವಿರುವುದಿಲ್ಲ.*

**ಪ್ರ: ನನ್ನ ನಿಗದಿತ ಅಥವಾ ಆವರ್ತಕ ಪಾವತಿಗಳು ಎಂದಿನಂತೆ ನಡೆಯುತ್ತವೆಯೇ?**

ಉ: ಸಿಸ್ಟಮ್ ಉನ್ನತೀಕರಣದ ಅವಧಿಯಲ್ಲಿ ಬರುವ ನಿಗದಿತ ಅಥವಾ ಆವರ್ತಕ ಪಾವತಿಗಳನ್ನು ಡೌನ್‌ಟೈಮ್ ಸಮಯದಲ್ಲಿ ಪ್ರಕ್ರಿಯೆಗೊಳಿಸಲಾಗುವುದಿಲ್ಲ ಹಾಗೂ ಸಿಸ್ಟಮ್ ಲೈವ್ ಆದ ನಂತರ ಪ್ರಕ್ರಿಯೆಗೊಳಿಸಲಾಗುತ್ತದೆ. ಆದಾಗ್ಯೂ, ಆವರ್ತಕ ಪಾವತಿ ಸೂಚನೆಯನ್ನು ನೀವು ಮರುಪರಿಶೀಲಿಸುವಂತೆ ನಾವು ಸೂಚಿಸುತ್ತೇವೆ

**ಪ್ರ: ATM ಸೇವೆಗಳ ಮೇಲೆ ಪರಿಣಾಮ ಆಗುತ್ತದೆಯೇ?**

*ಉ: ಹೌದು, ಉನ್ನತೀಕರಣದ ಅವಧಿಯಲ್ಲಿ ATM ಸೇವೆಗಳು ಲಭ್ಯವಿರುವುದಿಲ್ಲ.*

**ಪ್ರ: UPI / ಡಿಜಿಟಲ್ ಪಾವತಿಗಳ ಮೇಲೆ ಪರಿಣಾಮ ಆಗುತ್ತದೆಯೇ?**

*ಉ: ಹೌದು, ಉನ್ನತೀಕರಣದ ಸಮಯದಲ್ಲಿ ಈ ಸೇವೆಗಳು ಪ್ರಭಾವಿತಗೊಳ್ಳುತ್ತವೆ ಮತ್ತು ಗೋ ಲೈವ್ ನಂತರ ಲಭ್ಯವಿರುತ್ತವೆ.*

**ಪ್ರ: ಸಿಸ್ಟಮ್ ಉನ್ನತೀಕರಣದ ನಂತರ ನಾನು ಬ್ಯಾಂಕ್ UPI ಗಾಗಿ ಮತ್ತೆ ನೋಂದಾಯಿಸಿಕೊಳ್ಳಬೇಕೇ?**

ಉ: ಇಲ್ಲ

**ಪ್ರ: ಇತರ ಯಾವುದೇ ಚಾನಲ್‌ಗಳ ಮೇಲೆ ಪ್ರಭಾವವಾಗುವುದೇ?**

*ಉ: ಹೌದು, ಉನ್ನತೀಕರಣದ ಸಮಯದಲ್ಲಿ ಏಜೆನ್ಸಿ ಬ್ಯಾಂಕಿಂಗ್‌ನಂತಹ ಇತರ ಕೆಲವು ಸೇವೆಗಳು ಪ್ರಭಾವಿತಗೊಳ್ಳುತ್ತವೆ.*

**ಪ್ರ: ಚೆಕ್ ವಹಿವಾಟುಗಳ ಮೇಲೆ ಪರಿಣಾಮ ಆಗುತ್ತದೆಯೇ?**

ಉ: ಹೌದು. ಈ ಅವಧಿಯಲ್ಲಿ ಚೆಕ್‌ಗಳನ್ನು (ಒಳಬರುವ ಮತ್ತು ಹೊರಹೋಗುವ ಎರಡೂ) ಪ್ರಕ್ರಿಯೆಗೊಳಿಸಲಾಗುವುದಿಲ್ಲ.

**ಪ್ರ: ವಲಸೆಯ ನಂತರ ನನ್ನ ಅಸ್ತಿತ್ವದಲ್ಲಿರುವ ಚೆಕ್ ಬುಕ್ ಮಾನ್ಯವಾಗಿರುವುದೇ?**

ಉ: ಹೌದು

**ಪ್ರ: ವಲಸೆಗೆ ಮೊದಲು ನೀಡಲಾದ ಚೆಕ್‌ಗಳನ್ನು ಗೌರವಿಸಲಾಗುತ್ತದೆಯೇ? ತೆರವಾಗದ ಅಥವಾ ಬಾಕಿ ಉಳಿದಿರುವ ಚೆಕ್‌ಗಳಿಗೆ ಏನಾಗುತ್ತದೆ?**

ಉ: ಹೌದು; ಸಿಸ್ಟಮ್‌ಗಳು ಲಭ್ಯವಾದ ನಂತರ ಅವುಗಳನ್ನು ತೆರವುಗೊಳಿಸಲಾಗುತ್ತದೆ.

**ಪ್ರ: ತೆರವಾಗದ ಚೆಕ್‌ಗಳು / ಬಾಕಿ ಇರುವ ವಹಿವಾಟುಗಳು / ಸ್ಥಾಯಿ ಸೂಚನೆಗಳಿಗೆ ಏನಾಗುತ್ತದೆ?**

ಉ: ತೆರವಾಗದ ಆಗದ ಚೆಕ್‌ಗಳು ಮತ್ತು ಕಾರ್ಯಗತಗೊಳ್ಳದ ಸ್ಥಾಯಿ ಸೂಚನೆಗಳನ್ನು ಕಾರ್ಯಗತಗೊಳಿಸಲಾಗುತ್ತದೆ. ಉನ್ನತೀಕರಣಕ್ಕೆ ಮುನ್ನ ಪೂರ್ಣಗೊಳ್ಳದ ಬಾಕಿ ವಹಿವಾಟುಗಳನ್ನು ಮರು-ನಮೂದಿಸಬೇಕು / ಮರು-ಪ್ರಾರಂಭಿಸಬೇಕು

**ಪ್ರ: QR-ಆಧಾರಿತ ವ್ಯಾಪಾರಿ ಇತ್ಯರ್ಥಗಳ ಮೇಲೆ ಪರಿಣಾಮ ಆಗುತ್ತದೆಯೇ?**

ಉ: ಇಲ್ಲ, ಸಿಸ್ಟಮ್‌ಗಳು ಲಭ್ಯವಾದ ನಂತರವಷ್ಟೇ ನಿಮ್ಮ ಸಂಬಂಧಿತ ಖಾತೆಗೆ ಇತ್ಯರ್ಥ ಆಗುತ್ತದೆ.

**ಪ್ರ: ATM, POS, e-ಕಾಮರ್ಸ್ ಅಥವಾ ಕಾರ್ಡ್ ವಹಿವಾಟುಗಳಿಗೆ ಯಾವುದೇ ಡೌನ್‌ಟೈಮ್ ಇರುತ್ತದೆಯೇ?**

ಉ: ಹೌದು, ಉನ್ನತೀಕರಣದ ಸಮಯದಲ್ಲಿ ಈ ಸೇವೆಗಳು ಲಭ್ಯವಿರುವುದಿಲ್ಲ

**ಪ್ರ: ವರ್ಗಾವಣೆ ವಿಫಲವಾದರೆ ಏನಾಗುತ್ತದೆ (ಹಿಂತಿರುಗಿಸುವಿಕೆ / SMS ಮಾಹಿತಿ)?**

ಉ: ಉನ್ನತೀಕರಣದ ಅವಧಿಯಲ್ಲಿ, ನೀವು ಯಾವುದೇ ವರ್ಗಾವಣೆ ವಹಿವಾಟನ್ನು ಪ್ರಾರಂಭಿಸಲು ಆಗುವುದಿಲ್ಲ. ದಯವಿಟ್ಟು ಸಹಾಯಕ್ಕಾಗಿ ಬ್ಯಾಂಕಿನ ಗ್ರಾಹಕ ಸೇವೆ **(1800-103-3723)** ಯನ್ನು ಸಂಪರ್ಕಿಸಿ.

**ಪ್ರ: ಚೆಕ್ ಪಾವತಿ-ನಿಲ್ಲಿಸುವ ಸೂಚನೆಗಳನ್ನು ಪ್ರಕ್ರಿಯೆಗೊಳಿಸಲಾಗುತ್ತದೆಯೇ?**

ಉ: ಇಲ್ಲ

**ಪ್ರ: ಡೌನ್‌ಟೈಮ್‌ಗೆ ಮೊದಲು ಪ್ರಾರಂಭಿಸಲಾದ ವಹಿವಾಟನ್ನು ನಾನು ಹೇಗೆ ದೃಢೀಕರಿಸಬಹುದು?**

ಉ: ವಹಿವಾಟು ನಡೆದ ನಂತರ ನೀವು SMS ಅನ್ನು ಪಡೆಯುತ್ತೀರಿ

**ಪ್ರ: ಸೇವಾ ಅಡಚಣೆಯ ಸಮಯದಲ್ಲಿ ನನಗೆ ನಗದು ಅಗತ್ಯವಿದ್ದರೆ ನಾನು ಏನು**

**ಮಾಡಬೇಕು?**

ಉ: 23 ಅಕ್ಟೋಬರ್ 2026 ರಂದು ಸಂಜೆ 4 ಗಂಟೆಯ ಮೊದಲು ಶಾಖೆಯಿಂದ ಅಥವಾ ಸಂಜೆ 6 ಗಂಟೆಯ ಮೊದಲು ATM ಇಂದ ಹಣವನ್ನು ಹಿಂಪಡೆಯಬಹುದು

### 3.4 ಕಾರ್ಡ್‌ಗಳು – ಡೆಬಿಟ್ ಮತ್ತು ಕ್ರೆಡಿಟ್

**ಪ್ರ: ಪರಿವರ್ತನೆಯ ನಂತರ ಅಸ್ತಿತ್ವದಲ್ಲಿರುವ ಡೆಬಿಟ್ ಕಾರ್ಡ್ ಕೆಲಸ ಮಾಡುವುದೇ?**

ಉ: ಹೌದು

**ಪ್ರ: ಕಾರ್ಡ್ ವಹಿವಾಟುಗಳ (ಡೆಬಿಟ್/ಕ್ರೆಡಿಟ್) ಮೇಲೆ ಪರಿಣಾಮ ಆಗುತ್ತದೆಯೇ?**

ಉ: *ಉನ್ನತೀಕರಣದ ಅವಧಿಯಲ್ಲಿ ಡೆಬಿಟ್ ಕಾರ್ಡ್ ಸೇವೆಗಳು ಪ್ರಭಾವಿತಗೊಳ್ಳುತ್ತವೆ. ಕ್ರೆಡಿಟ್ ಕಾರ್ಡ್ ಸೇವೆಗಳು ಲಭ್ಯವಿರುತ್ತವೆ.*

**ಪ್ರ: ಪರಿವರ್ತನೆಯ ನಂತರ ಅಸ್ತಿತ್ವದಲ್ಲಿರುವ ಡೆಬಿಟ್ / ಕ್ರೆಡಿಟ್ ಕಾರ್ಡ್ ವಿವರಗಳು ಬದಲಾವಣೆ ಆಗುತ್ತವೆಯೇ?**

ಉ: ಇಲ್ಲ

**ಪ್ರ: ಹೊಸ ಇಂಟರ್ನೆಟ್ ಬ್ಯಾಂಕಿಂಗ್ ಮತ್ತು ಮೊಬೈಲ್ ಬ್ಯಾಂಕಿಂಗ್ ಪ್ಲ್ಯಾಟ್‌ಫಾರ್ಮ್‌ನಲ್ಲಿ ಎಲ್ಲಾ ಖಾತೆಗಳು (ಕ್ರೆಡಿಟ್ ಕಾರ್ಡ್‌ಗಳು ಸೇರಿದಂತೆ) ಗೋಚರಿಸುತ್ತವೆಯೇ?**

ಉ: *ಹೌದು*

### 3.5 ಸ್ಥಿರ ಠೇವಣಿ / ಆವರ್ತಕ ಠೇವಣಿಗಳು

**ಪ್ರ: ಪರಿವರ್ತನೆಯ ಅವಧಿಯಲ್ಲಿ ನಾನು ಮೊಬೈಲ್ ಬ್ಯಾಂಕಿಂಗ್, ಇಂಟರ್ನೆಟ್ ಬ್ಯಾಂಕಿಂಗ್ ಅಥವಾ ಶಾಖೆಯ ಮೂಲಕ FD ಅನ್ನು ತೆರೆಯಲು, ನವೀಕರಿಸಲು ಅಥವಾ ಮುಚ್ಚಲು ಆಗುವುದೇ?**

ಉ: *ಇಲ್ಲ. ಈ ಅವಧಿಯಲ್ಲಿ ಮೊಬೈಲ್ ಬ್ಯಾಂಕಿಂಗ್ ಮತ್ತು ಇಂಟರ್ನೆಟ್ ಬ್ಯಾಂಕಿಂಗ್ ಲಭ್ಯವಿರುವುದಿಲ್ಲ, ಹಾಗೂ ನಾಲ್ಕನೇ ಶನಿವಾರ ಮತ್ತು ಭಾನುವಾರದಂದು ಶಾಖೆಗಳು ಮುಚ್ಚಲ್ಪಡುತ್ತವೆ.*

**ಪ್ರ: ವಲಸೆಯ ನಂತರ ನನ್ನ ಅಸ್ತಿತ್ವದಲ್ಲಿರುವ ಸ್ಥಿರ ಠೇವಣಿಗಳು ಯಾವುದೇ ಬದಲಾವಣೆಯಿಲ್ಲದೆ ಮುಂದುವರಿಯುತ್ತವೆಯೇ?**

*ಉ: ಹೌದು, ಯಾವುದೇ ಬದಲಾವಣೆಯಿರುವುದಿಲ್ಲ*

**ಪ್ರ: ಸಂಚಿತ FD ಯಲ್ಲಿ ಬಡ್ಡಿ ಲೆಕ್ಕಾಚಾರದ ವ್ಯತ್ಯಾಸದಿಂದಾಗಿ ಮುಕ್ತಾಯದ ಮೊತ್ತದಲ್ಲಿ ಯಾವುದೇ ಬದಲಾವಣೆ ಇರುತ್ತದೆಯೇ?**

*ಉ: ಇಲ್ಲ, ಅದು ಬದಲಾಗುವುದಿಲ್ಲ*

**ಪ್ರ: ವಿಶೇಷವಾಗಿ ಸಂಚಿತ FD ಗಳಿಗಾಗಿ ಬಡ್ಡಿ ಲೆಕ್ಕಾಚಾರದಲ್ಲಿ ಯಾವುದೇ ವ್ಯತ್ಯಾಸವಿರುತ್ತದೆಯೇ?**

*ಉ: ಇಲ್ಲ, ಅಸ್ತಿತ್ವದಲ್ಲಿರುವ ಎಲ್ಲಾ FD/RD ಗಳು ಅನ್ವಯವಾಗುವ ಬಡ್ಡಿದರಗಳನ್ನು*

*ಆನಂದಿಸುವುದನ್ನು ಮುಂದುವರಿಸುತ್ತವೆ*

**ಪ್ರ: ನನ್ನ ಬಡ್ಡಿದರಗಳು (ಪ್ರಸ್ತುತ ಸ್ಥಿರ ಠೇವಣಿಗಳು, ಉಳಿತಾಯ ಖಾತೆಗಳು, ಇತ್ಯಾದಿ) ಶುಲ್ಕಗಳು ಅಥವಾ ವೆಚ್ಚಗಳು ಬದಲಾಗುತ್ತವೆಯೇ?**

*ಉ: ಇಲ್ಲ, ಅದು ಬದಲಾಗುವುದಿಲ್ಲ*

**ಪ್ರ: ಬ್ಯಾಂಕ್ ನೀಡುವ FD ಬಡ್ಡಿದರಗಳ ಮೇಲೆ ಪರಿವರ್ತನೆಯು ಪರಿಣಾಮ ಬೀರುತ್ತದೆಯೇ?**

*ಉ: ಇಲ್ಲ, ಅದು ಬದಲಾಗುವುದಿಲ್ಲ*

**ಪ್ರ: ನನ್ನ FD/RD/SB ಬಡ್ಡಿ ಪಾವತಿಗೆ ಸಂಬಂಧಿಸಿದಂತೆ ಪ್ರಸ್ತುತ ಪ್ರಕ್ರಿಯೆಯಿಂದ ಬದಲಾವಣೆಗಳೇನು**

ಉ: ಯಾವುದೇ ಬದಲಾವಣೆಗಳಿರುವುದಿಲ್ಲ.

- ಮಾಸಿಕ ಮತ್ತು ತ್ರೈಮಾಸಿಕ ಪಾವತಿ FD ಗಳಿಗೆ ಕ್ಯಾಲೆಂಡರ್ ಆಧಾರದ ಮೇಲೆ ಬಡ್ಡಿ ಪಾವತಿ (ನಂತರದ ತಿಂಗಳ 1 ನೇ ತಾರೀಖು / ತ್ರೈಮಾಸಿಕ BOD).
- ಮಲ್ಟಿಪ್ಲೈಯರ್ FD ಗಾಗಿ ವಾರ್ಷಿಕೋತ್ಸವದ ಆಧಾರದ ಮೇಲೆ ಬಡ್ಡಿ ಸಂಚಯನ (ತೆರೆದ ದಿನಾಂಕದಿಂದ ಮೂರು ತಿಂಗಳುಗಳು).
- ಅಲ್ಪಾವಧಿ FD ಗಳಿಗಾಗಿ ಮುಕ್ತಾಯದ ಸಮಯದಲ್ಲಿ ಬಡ್ಡಿ ಪಾವತಿ.
- RD ಗಳಿಗಾಗಿ ವಾರ್ಷಿಕೋತ್ಸವದ ಆಧಾರದ ಮೇಲೆ ಬಡ್ಡಿ ಸಂಚಯನ (ತೆರೆದ ದಿನಾಂಕದಿಂದ ಮೂರು ತಿಂಗಳುಗಳು).
- ಉಳಿತಾಯ ಬ್ಯಾಂಕ್ ಖಾತೆಯ ಬಡ್ಡಿ ಪಾವತಿಯು ಮಾಸಿಕ ಕ್ಯಾಲೆಂಡರ್ ಆಧಾರದ ಮೇಲೆ ಇರುತ್ತದೆ. ಅಸ್ತಿತ್ವದಲ್ಲಿರುವ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ತಿಂಗಳ ಅಂತ್ಯದ EOD ಸಮಯದಲ್ಲಿ ಬಡ್ಡಿಯ ಮೊತ್ತವು ಜಮೆಯಾಗುತ್ತದೆ.
- FD ಮಾಸಿಕ ಬಡ್ಡಿ ಪಾವತಿಯನ್ನು ಇನ್ನೊಂದು ಬ್ಯಾಂಕ್‌ಗೆ ವರ್ಗಾಯಿಸಬೇಕಾದರೆ, NEFT ಆಯ್ಕೆಯನ್ನು ಬಳಸಿ ಮಾಡಬಹುದು.
- SB ಖಾತೆಗಾಗಿ ಮಾಸಿಕ ಬಡ್ಡಿ ಪಾವತಿ

**ಪ್ರ: ನನಗೆ ಮಾಸಿಕ ಬಡ್ಡಿ ಬಂದಿಲ್ಲ**

ಉ: ನಿಮ್ಮ ಹಣ ನಮ್ಮೊಂದಿಗೆ ಸುರಕ್ಷಿತವಾಗಿದೆ ಎಂದು ಖಚಿತವಾಗಿರಿ. ದಯವಿಟ್ಟು ನಮ್ಮ ಕಾಲ್ ಸೆಂಟರ್ ಅಥವಾ ನಮ್ಮ ಹತ್ತಿರದ ಶಾಖೆಯನ್ನು ಸಂಪರ್ಕಿಸಿ ಹಾಗೂ ನಾವು ಅದನ್ನು ಪರಿಹರಿಸುತ್ತೇವೆ.

**ಪ್ರ: ನಾನು ಮಚ್ಯೂರಿಟಿ ಪೇಔಟ್ ಸೂಚನೆಯನ್ನು ಬದಲಾಯಿಸಬಹುದೇ.**

ಉ: ಹೌದು, ನೀವು ಅದನ್ನು ಮಾಡಬಹುದು.

**ಪ್ರ: ನಾನು ನನ್ನ ಖಾತೆಗಳಲ್ಲಿ ನಾಮಿನಿಯನ್ನು ಸೇರಿಸಬಹುದೇ / ಬದಲಾಯಿಸಬಹುದೇ.**

ಉ: ಹೌದು, ನೀವು ನಿಮ್ಮ ಮೊಬೈಲ್ ಆ್ಯಪನ್ನು ಬಳಸಿ ಅಥವಾ ಹತ್ತಿರದ ಶಾಖೆಗೆ ಭೇಟಿ ನೀಡುವ ಮೂಲಕ ಅಥವಾ ನಮ್ಮ ಗ್ರಾಹಕ ಸೇವಾ ಕೇಂದ್ರಕ್ಕೆ ಕರೆ ಮಾಡುವ ಮೂಲಕ ಅದನ್ನು ಮಾಡಬಹುದು.

### 3.6 ಸಾಲ ಮತ್ತು ಮರುಪಾವತಿಗಳು

**ಪ್ರ: ವಲಸೆಯ ನಂತರ ನನ್ನ ಅಸ್ತಿತ್ವದಲ್ಲಿರುವ ಸಾಲದ ಖಾತೆಯ ಸಂಖ್ಯೆಯು ಬದಲಾಗುತ್ತದೆಯೇ?**

*ಉ: ಇಲ್ಲ, ನಿಮ್ಮ ಅಸ್ತಿತ್ವದಲ್ಲಿರುವ ಸಾಲದ ಖಾತೆ ಸಂಖ್ಯೆಯು ಹಾಗೆಯೇ ಇರುತ್ತದೆ.*

**ಪ್ರ: ನನ್ನ EMI ಮೊತ್ತ ಅಥವಾ ಮರುಪಾವತಿ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆ ಇರುತ್ತದೆಯೇ?**

ಉ: *ಇಲ್ಲ*

**ಪ್ರ: ಕಟ್‌ಓವರ್ ಸಮಯದಲ್ಲಿ ನಾನು UPI / Google pay / Phonepe / Paytm QR ಕೋಡ್, ಇತ್ಯಾದಿಗಳ ಮೂಲಕ ಸಾಲದ ಮರುಪಾವತಿಯನ್ನು ಪಾವತಿಸಬಹುದೇ?**

*ಉ: ಇಲ್ಲ, ಏಕೆಂದರೆ ಬ್ಯಾಂಕ್‌ನ ಸಿಸ್ಟಮ್ ಲಭ್ಯವಿರುವುದಿಲ್ಲ*

**ಪ್ರ: ನನ್ನ ಲೋನ್ ಕಾರ್ಡ್‌ನಲ್ಲಿರುವ QR ಕೋಡ್ ಮೇಲೆ ಪರಿಣಾಮ ಆಗುತ್ತದೆಯೇ?**

ಉ: *ಇಲ್ಲ, ಆದರೆ ಕಟ್‌ಓವರ್ ಅವಧಿಯಲ್ಲಿ ನೀವು ಯಾವುದೇ ಪಾವತಿಗಳನ್ನು ಮಾಡಲು ಆಗುವುದಿಲ್ಲ.* ನಿಮ್ಮ EMI ಪಾವತಿಗಳು / ಬಾಕಿಗಳನ್ನು ಒಂದು ಅಥವಾ ಎರಡು ದಿನ ಮುಂಚಿತವಾಗಿ ಪಾವತಿಸುವಂತೆ ನಾವು ಶಿಫಾರಸು ಮಾಡುತ್ತೇವೆ.

**ಪ್ರ: ನನ್ನ ಸಾಲದ ವೇಳಾಪಟ್ಟಿಯ ಮೇಲೆ ಪರಿಣಾಮವಿರುತ್ತದೆಯೇ?**

ಉ: *ಇಲ್ಲ*

**ಪ್ರ: ನನ್ನ ಅಸ್ತಿತ್ವದಲ್ಲಿರುವ EMI, NACH/ECS ಮ್ಯಾಂಡೇಟ್, ಸ್ಥಾಯಿ ಸೂಚನೆ ಮತ್ತು ಆಟೋ-ಡೆಬಿಟ್ ಮರು-ನೋಂದಣಿ ಇಲ್ಲದೆ ಮುಂದುವರಿಯುತ್ತವೆಯೇ?**

*ಉ: ಹೌದು, ಅವುಗಳು ಮುಂದುವರಿಯುತ್ತವೆ*

**ಪ್ರ: ಪರಿವರ್ತನೆಯ ಸಮಯದಲ್ಲಿ ಸಾಲ ಮರುಪಾವತಿ ಮಾಡುವಲ್ಲಿ ಅಥವಾ ನನ್ನ ಸಾಲವನ್ನು ಮುಚ್ಚುವಲ್ಲಿ ನಾನು ಯಾವುದೇ ತೊಂದರೆ ಎದುರಿಸಬೇಕಾಗುತ್ತದೆಯೇ?**

*ಉ: ಹೌದು, ಪರಿವರ್ತನೆಯ ಅವಧಿಯಲ್ಲಿ ನೀವು ಯಾವುದೇ ವಹಿವಾಟುಗಳನ್ನು (ಹಣಕಾಸು ಮತ್ತು ಹಣಕಾಸೇತರ ಎರಡೂ) ಕೈಗೊಳ್ಳಲು ಆಗುವುದಿಲ್ಲ.*

**ಪ್ರ: ವಲಸೆ-ಸಂಬಂಧಿತ ಡೌನ್‌ಟೈಮ್‌ನಿಂದಾಗಿ ಮರುಪಾವತಿ ವಿಳಂಬವಾದರೆ, ನಾನು ಹೆಚ್ಚುವರಿ ಬಡ್ಡಿ ಅಥವಾ ಶುಲ್ಕಗಳನ್ನು ಪಾವತಿಸಬೇಕೇ?**

*ಉ: ಇಲ್ಲ, ಅಂತಹ ಶುಲ್ಕಗಳು ಉದ್ಭವಿಸಿದರೆ ಬ್ಯಾಂಕ್ ಅವುಗಳನ್ನು ಮನ್ನಾ ಮಾಡುತ್ತದೆ*

**ಪ್ರ: ಆ ದಿನಗಳ ನನ್ನ NACH/ECS ಮ್ಯಾಂಡೇಟ್ ಪ್ರಕ್ರಿಯೆಗೊಳ್ಳುತ್ತದೆಯೇ ಹಾಗೂ ಅದು ವಿಳಂಬವಾದರೆ ಅದು ನನ್ನ ಕ್ರೆಡಿಟ್ ಸ್ಕೋರ್ ಮೇಲೆ ಪರಿಣಾಮ ಬೀರುತ್ತದೆಯೇ?**

ಉ: ಉನ್ನತೀಕರಣದ ಅವಧಿಯಲ್ಲಿ, NACH/ECS ಅಧ್ಯಾದೇಶಗಳನ್ನು ಪ್ರಕ್ರಿಯೆಗೊಳಿಸಲಾಗುವುದಿಲ್ಲ. ಅದು 26 ಅಕ್ಟೋಬರ್ 2026 ರಂದು ಮರುಪ್ರಾರಂಭಗೊಳ್ಳುತ್ತದೆ.

### 3.7 ಗ್ರಾಹಕ ನೆರವು ಮತ್ತು ಭದ್ರತೆ

**ಪ್ರ: ಪರಿವರ್ತನೆಯ ನಂತರ ನಾನು ಸಮಸ್ಯೆಯನ್ನು ಎದುರಿಸಿದರೆ ಯಾರನ್ನು ಸಂಪರ್ಕಿಸಬೇಕು?**

*ಉ: ಗ್ರಾಹಕ ಸೇವೆ ಅಥವಾ ನಿಮ್ಮ ರಿಲೇಶನ್‌ಶಿಪ್ ಮ್ಯಾನೇಜರ್ ಅವರನ್ನು ಸಂಪರ್ಕಿಸಿ*

**ಪ್ರ: ತುರ್ತು ಅಥವಾ ನಿರ್ಣಾಯಕ ಸಮಸ್ಯೆಗಳಿಗಾಗಿ ಮೀಸಲಾದ ಗ್ರಾಹಕ ನೆರವು/ಸಹಾಯವಾಣಿ ಇರುತ್ತದೆಯೇ?**

ಉ: *ಹೌದು*

**ಪ್ರ: ಪರಿವರ್ತನೆಯ ಸಮಯದಲ್ಲಿ ನನ್ನ ಖಾತೆ, ಠೇವಣಿ, ಸಾಲ ಮತ್ತು ವಹಿವಾಟಿನ ದತ್ತಾಂಶ ಸುರಕ್ಷಿತವಾಗಿರುತ್ತದೆಯೇ?**

ಉ: *ಹೌದು*

**ಪ್ರ: ಪರಿವರ್ತನೆಗೆ ಸಂಬಂಧಿಸಿದ ನಿಜವಾದ ESAF ಸಂವಹನವನ್ನು ನಾನು ಹೇಗೆ ಗುರುತಿಸುವುದು ಹಾಗೂ ಮೋಸದ ಸಂದೇಶಗಳು ಅಥವಾ ಫಿಶಿಂಗ್ ಪ್ರಯತ್ನಗಳನ್ನು ತಪ್ಪಿಸುವುದು ಹೇಗೆ?**

*ಉ: ಬ್ಯಾಂಕ್ ಎಂದಿಗೂ OTP, PIN, ಪಾಸ್‌ವರ್ಡ್ ಅಥವಾ ಯಾವುದೇ ಇತರ ವಹಿವಾಟು ವಿವರಗಳನ್ನು ಕೇಳುವುದಿಲ್ಲ. ಪರಿವರ್ತನೆಯ ಪರಿಷ್ಕೃತ ಮಾಹಿತಿಗಾಗಿ ಯಾವಾಗಲೂ www.esaf.bank.in ವೆಬ್‌ಸೈಟನ್ನು ನೋಡಿ. ESAF ಬ್ಯಾಂಕ್ ಹೆಸರಿನಲ್ಲಿರುವ ಯಾವುದೇ ಲಿಂಕನ್ನು ಕ್ಲಿಕ್ ಮಾಡಬೇಡಿ.*

**ಪ್ರ: ಈ ಬದಲಾವಣೆಯ ಸಮಯದಲ್ಲಿ ನನ್ನ ಹಣ ಸುರಕ್ಷಿತವಾಗಿದೆಯೇ?**

*ಉ: ಹೌದು, ಸಿಸ್ಟಮ್ ಉನ್ನತೀಕರಣದಾದ್ಯಂತ ನಿಮ್ಮ ಹಣ ಮತ್ತು ಖಾತೆಯ ಮಾಹಿತಿಯು ಸುರಕ್ಷಿತವಾಗಿ ಮತ್ತು ಸುಭದ್ರವಾಗಿ ಉಳಿಯುತ್ತವೆ.*

**ಪ್ರ: ನನ್ನ ವೈಯಕ್ತಿಕ ಮತ್ತು ಖಾತೆಯ ಮಾಹಿತಿ ಸುರಕ್ಷಿತವಾಗಿವೆಯೇ?**

*ಉ: ಹೌದು, ಸಿಸ್ಟಮ್ ಉನ್ನತೀಕರಣದಾದ್ಯಂತ ನಿಮ್ಮ ಹಣ ಮತ್ತು ಖಾತೆಯ ಮಾಹಿತಿಯು ಸುರಕ್ಷಿತವಾಗಿ ಮತ್ತು ಸುಭದ್ರವಾಗಿ ಉಳಿಯುತ್ತವೆ.*

**ಪ್ರ: ನನ್ನ ದತ್ತಾಂಶವನ್ನು ಸುರಕ್ಷಿತವಾಗಿ ವರ್ಗಾಯಿಸಲಾಗುತ್ತದೆಯೇ/ವಲಸೆ ಮಾಡಲಾಗುತ್ತದೆಯೇ?**

*ಉ: ಹೌದು, ಸಿಸ್ಟಮ್ ಉನ್ನತೀಕರಣದಾದ್ಯಂತ ನಿಮ್ಮ ಹಣ ಮತ್ತು ಖಾತೆಯ ಮಾಹಿತಿಯು ಸುರಕ್ಷಿತವಾಗಿ ಮತ್ತು ಸುಭದ್ರವಾಗಿ ಉಳಿಯುತ್ತವೆ.*

**ಪ್ರ: ವಹಿವಾಟು ಭದ್ರತೆ ಅಥವಾ ದೃಢೀಕರಣ ವಿಧಾನಗಳು ಬದಲಾಗುತ್ತವೆಯೇ?**

ಉ: *ಇಲ್ಲ*

**ಪ್ರ: ಏನಾದರೂ ಅನುಮಾನಾಸ್ಪದವಾದುದು ನನ್ನ ಗಮನಕ್ಕೆ ಬಂದರೆ ನಾನು ಏನು ಮಾಡಬೇಕು?**

*ಉ: ತಕ್ಷಣವೇ ನಮ್ಮ ಗ್ರಾಹಕ ಸೇವೆ* **(1800-103-3723)** */ ಶಾಖಾ ವ್ಯವಸ್ಥಾಪಕರು ಅಥವಾ ರಿಲೇಶನ್‌ಶಿಪ್ ಮ್ಯಾನೇಜರ್ ಅವರನ್ನು ಸಂಪರ್ಕಿಸಿ. ನಿಮ್ಮ OTP, PIN, ಪಾಸ್‌ವರ್ಡ್ ಅಥವಾ ಖಾತೆಯ ವಿವರಗಳನ್ನು ಯಾರೊಂದಿಗೂ ಹಂಚಿಕೊಳ್ಳಬೇಡಿ. ದಯವಿಟ್ಟು ಯಾವುದೇ ಸಂದೇಶದ ಲಿಂಕ್‌ಗಳನ್ನು ಕ್ಲಿಕ್ ಮಾಡಬೇಡಿ.*

**ಪ್ರ: ವಲಸೆಯ ಸಮಯದಲ್ಲಿ ನನ್ನ ಮಾಹಿತಿಗೆ ಪ್ರವೇಶ ಯಾರು ಹೊಂದಿರುತ್ತಾರೆ?**

ಉ: ಬ್ಯಾಂಕ್‌ನಲ್ಲಿ ಅಧಿಕಾರ ಹೊಂದಿರುವ ಬ್ಯಾಂಕ್ ಉದ್ಯೋಗಿಗಳಿಗೆ ಮಾತ್ರ ದತ್ತಾಂಶಕ್ಕೆ ಪ್ರವೇಶವಿರುತ್ತದೆ. *ಎಲ್ಲಾ ಗ್ರಾಹಕರ ವೈಯಕ್ತಿಕ ಮಾಹಿತಿ PI ದತ್ತಾಂಶವನ್ನು (ವೈಯಕ್ತಿಕ/KYC/ಖಾತೆಐ ವಿವರಗಳು) ಮಾಸ್ಕ್ ಮಾಡಲಾಗಿರುತ್ತದೆ ಹಾಗೂ ಸಿಸ್ಟಮ್ ಉನ್ನತೀಕರಣದಾದ್ಯಂತ ನಿಮ್ಮ ಖಾತೆಯ ಮಾಹಿತಿಯು ಸುರಕ್ಷಿತವಾಗಿ ಮತ್ತು ಸುಭದ್ರವಾಗಿ ಉಳಿಯುತ್ತದೆ.*

**ಪ್ರ: ಈ ಬದಲಾವಣೆಯ ಕಾರಣದಿಂದಾಗಿ ಬ್ಯಾಂಕ್ ಎಂದಾದರೂ ನನಗೆ ಕರೆ ಮಾಡಿ ಅಥವಾ ಸಂದೇಶ ಕಳುಹಿಸಿ ನನ್ನ PIN, ಪಾಸ್‌ವರ್ಡ್ ಅಥವಾ OTP ಕೇಳುವುದೇ?**

*ಉ: ಇಲ್ಲ, ನಿಮ್ಮ OTP, PIN, ಪಾಸ್‌ವರ್ಡ್ ಅಥವಾ ಖಾತೆಯ ವಿವರಗಳನ್ನು ಎಂದಿಗೂ ಯಾರೊಂದಿಗೂ ಹಂಚಿಕೊಳ್ಳಬೇಡಿ*

**ಪ್ರ: ಪರಿವರ್ತನೆಯ ಅವಧಿಯಲ್ಲಿ ಬ್ಯಾಂಕ್ ನನ್ನೊಂದಿಗೆ WhatsApp ಮೂಲಕ ಸಂವಹನ ನಡೆಸುವುದೇ?**

*ಉ: ಇಲ್ಲ, ಪರಿವರ್ತನೆಗೆ ಸಂಬಂಧಿಸಿದಂತೆ ಬ್ಯಾಂಕ್ ಯಾವುದೇ WhatsApp ಸಂದೇಶಗಳನ್ನು ಕಳುಹಿಸುವುದಿಲ್ಲ.*

**ಪ್ರ: WhatsApp ಬ್ಯಾಂಕಿಂಗ್ ಕಾರ್ಯಕ್ಷಮತೆಯಲ್ಲಿ ಏನಾದರೂ ಬದಲಾವಣೆ ಇರುತ್ತದೆಯೇ?**

*ಉ: ಇಲ್ಲ, WhatsApp ಬ್ಯಾಂಕಿಂಗ್ ಕಾರ್ಯಕ್ಷಮತೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಅದು ಮೊದಲಿನಂತೆಯೇ ಅದೇ ಕಾರ್ಯಕ್ಷಮತೆ ಮತ್ತು ವೈಶಿಷ್ಟ್ಯಗಳನ್ನು ನೀಡುತ್ತಾ ಎಂದಿನಂತೆ ಕಾರ್ಯನಿರ್ವಹಿಸುವುದನ್ನು ಮುಂದುವರಿಸುವುದು.*

## 4. ಗ್ರಾಹಕರು ಕೈಗೊಳ್ಳಬೇಕಾಗಿರುವ ಕ್ರಮಗಳು

**ಪ್ರ: ನಾನು ಯಾವುದೇ ಕ್ರಮ ತೆಗೆದುಕೊಳ್ಳಬೇಕೇ?**

ಉ: SMS/ಇಮೇಲ್/ಬ್ಯಾಂಕ್ ವೆಬ್‌ಸೈಟ್‌ನ ಮೂಲಕ ಬ್ಯಾಂಕ್ ಒದಗಿಸುವ ಸೂಚನೆಗಳನ್ನು ಅನುಸರಿಸಿ

**ಪ್ರ: ಪರಿವರ್ತನೆಯ ಅವಧಿಯಲ್ಲಿ ಬ್ಯಾಂಕ್ ನನ್ನೊಂದಿಗೆ ಹೇಗೆ ಸಂವಹನ ನಡೆಸುವುದು?**

ಉ: ನಮ್ಮಲ್ಲಿ ಲಭ್ಯವಿರುವ SMS / ನೋಂದಾಯಿತ ಮೇಲ್ IDಗಳ ಮೂಲಕ ಮಾತ್ರ ನಾವು ನಿಮ್ಮೊಂದಿಗೆ ಸಂವಹನ ನಡೆಸುತ್ತೇವೆ. ನಾವು ಪರಿವರ್ತನೆಗೆ ಸಂಬಂಧಿಸಿದ ಯಾವುದೇ Whatsapp ಸಂದೇಶಗಳನ್ನು ಕಳುಹಿಸುವುದಿಲ್ಲ. ನಿಮಗೆ ಅಗತ್ಯವಿರುವ ಯಾವುದೇ ಸಹಾಯವನ್ನು ಒದಗಿಸಲು ನಮ್ಮ ಸಹಾಯವಾಣಿಯು 24x7 ನಿಮ್ಮ ಸೇವೆಗಾಗಿ ಲಭ್ಯವಿರುತ್ತದೆ. ನೀವು ***1800-103-3723*** ಗೆ ಕರೆ ಮಾಡುವ ಮೂಲಕ ನಮ್ಮನ್ನು ಸಂಪರ್ಕಿಸಬಹುದು

**ಪ್ರ: ಪರಿವರ್ತನೆಗೆ ಸಂಬಂಧಿಸಿದಂತೆ ಬ್ಯಾಂಕ್ ಕಳುಹಿಸುವ ಸಂದೇಶಗಳಲ್ಲಿರುವ ಲಿಂಕನ್ನು ಕ್ಲಿಕ್ ಮಾಡುವುದು ಸುರಕ್ಷಿತವೇ.**

ಉ: ಪರಿವರ್ತನೆಗೆ ಸಂಬಂಧಿಸಿದ ಸಂದೇಶಗಳಲ್ಲಿ ಬ್ಯಾಂಕ್ ಯಾವುದೇ ಲಿಂಕನ್ನು ಕಳುಹಿಸುವುದಿಲ್ಲ. ಪರಿವರ್ತನೆಗೆ ಸಂಬಂಧಿಸಿದ ಸಂದೇಶಗಳಲ್ಲಿರುವ ಯಾವುದೇ ಲಿಂಕ್‌ಗಳನ್ನು ದಯವಿಟ್ಟು ಕ್ಲಿಕ್ ಮಾಡಬೇಡಿ.

**ಪ್ರ: ಪರಿವರ್ತನೆಗಾಗಿ ನನ್ನಿಂದ ಯಾವುದೇ ದಾಖಲೆಗಳು ಅಗತ್ಯವಿರುತ್ತವೆಯೇ?**

ಉ: *ಇಲ್ಲ*

**ಪ್ರ: ನಾನು ಪರಿವರ್ತನೆಗಾಗಿ ನನ್ನ ಯಾವುದೇ ವಿವರಗಳನ್ನು ಪರಿಷ್ಕರಿಸಬೇಕಾಗುತ್ತದೆಯೇ?**

*ಉ: ಪರಿವರ್ತನೆಗಾಗಿ ಅಗತ್ಯವಿಲ್ಲ. ಆದಾಗ್ಯೂ, ನಿಮ್ಮ ಸರಿಯಾದ ಸಂಪರ್ಕ ಸಂಖ್ಯೆ ಮತ್ತು ಮೇಲ್ ID (ಅನ್ವಯಿಸಿದರೆ) ಅನ್ನು ನೀವು ನವೀಕರಿಸುವುದು ಸೂಕ್ತವಾಗಿರುತ್ತದೆ, ಇದರಿಂದ ಪರಿವರ್ತನೆಗೆ ಸಂಬಂಧಿಸಿದ ಯಾವುದೇ ಸಂವಹನವನ್ನು ನಿಮಗೆ ತ್ವರಿತವಾಗಿ ತಲುಪಿಸಲು ಸಾಧ್ಯವಾಗುವುದು.*

**ಪ್ರ: ನಾನು ಏನನ್ನಾದರೂ ಡೌನ್‌ಲೋಡ್ ಮಾಡಬೇಕೇ ಅಥವಾ ಅನುಸ್ಥಾಪಿಸಬೇಕೇ?**

ಉ: *ಹೌದು, ESAF* Bank *ಮೊಬೈಲ್ ಬ್ಯಾಂಕಿಂಗ್ ಅಪ್ಲಿಕೇಶನ್ ಅನ್ನು ಮಾತ್ರ, ಇದು 26 ಅಕ್ಟೋಬರ್ 2026 ರಿಂದ App/ Play store ನಲ್ಲಿ ಲಭ್ಯವಿರುತ್ತದೆ.*

**ಪ್ರ: ನಾನು ಯಾವುದೇ ಅಗತ್ಯ ಕ್ರಮವನ್ನು ಪೂರ್ಣಗೊಳಿಸಬೇಕಾದದಂತಹ ಯಾವುದೇ ಅಂತಿಮ ಗಡುವು ಇದೆಯೇ?**

**ಉ:** *ಅಗತ್ಯವಿದ್ದಲ್ಲಿ, ಬ್ಯಾಂಕ್ ನಿಮಗೆ ಮುಂಚಿತವಾಗಿ ತಿಳಿಸುತ್ತದೆ*

**ಪ್ರ: ನನ್ನ ಕಡೆಯಿಂದ ಎಲ್ಲವೂ ಪೂರ್ಣಗೊಂಡ ನಂತರ ನನಗೆ ದೃಢೀಕರಣ ದೊರೆಯುವುದೇ?**

ಉ: ಪರಿವರ್ತನೆಯ ಸಮಯದಲ್ಲಿ ಹಾಗೂ ಪರಿವರ್ತನೆ ಪೂರ್ಣಗೊಂಡ ನಂತರ ಬ್ಯಾಂಕ್ ನಿಮಗೆ ನಿಯತಕಾಲಿಕವಾಗಿ ಪರಿಷ್ಕರಣೆಗಳನ್ನು ಒದಗಿಸುತ್ತದೆ. ಇದಕ್ಕೆ ಸಂಬಂಧಿಸಿದ ಮಾಹಿತಿಯನ್ನು ನಮ್ಮ ವೆಬ್‌ಸೈಟ್‌ಗಳು ಮತ್ತು ಶಾಖೆಗಳಲ್ಲಿ ನಿಯತಕಾಲಿಕವಾಗಿ ಪರಿಷ್ಕರಿಸಲಾಗುತ್ತದೆ.

## 5. ಸಹಾಯ ಮತ್ತು ನೆರವು

**ಪ್ರ: ನಾನು ಯಾವುದೇ ಪ್ರಶ್ನೆ ಅಥವಾ ಸಮಸ್ಯೆ ಇದ್ದರೆ ನಾನು ಯಾರನ್ನು ಸಂಪರ್ಕಿಸಬೇಕು?**

ಉ: ನಿಮ್ಮ ಶಾಖಾ ವ್ಯವಸ್ಥಾಪಕರು ಅಥವಾ ರಿಲೇಶನ್‌ಶಿಪ್ ಮ್ಯಾನೇಜರ್ ಅಥವಾ ನಿಮ್ಮ ನಿಯಮಿತ ಏಜೆಂಟ್/ಬಿಸಿನೆಸ್ ಕರೆಸ್ಪೊಂಡೆಂಟ್, ಅಥವಾ ESAF Bank ಗ್ರಾಹಕ ಸೇವೆ

**ಪ್ರ: ಗ್ರಾಹಕ ಸೇವಾ ಸಂಖ್ಯೆ / ಇಮೇಲ್ ಯಾವುದು?**

ಉ: ***ESAF ಬ್ಯಾಂಕ್‌ನ ಗ್ರಾಹಕ ಸೇವೆ***

📞 ***ಶುಲ್ಕ-ಮುಕ್ತ ಗ್ರಾಹಕ ಸೇವೆ***

- ***1800- 103- 3723*** *(1800-103-ESAF)*

- 📞 *NRI ಗ್ರಾಹಕ ಸೇವೆ (ಶುಲ್ಕ ಅನ್ವಯಿಸುವ ಲೈನ್)*

  ***080-4552-0100***

***ಗ್ರಾಹಕ ಸೇವಾ ಇಮೇಲ್***

- ***customercare@esafbank.com***
- ***ಹೊಸ ಉತ್ಪನ್ನಗಳ ಕುರಿತು ವಿಚಾರಣೆಗಾಗಿ***

  ***enquiry@esafbank.com***

**ಪ್ರ: ನನಗೆ ನನ್ನ ಶಾಖೆಯಲ್ಲಿ ಸಹಾಯ ಸಿಗಬಹುದೇ?**

*ಉ: ಹೌದು, ಕೆಲಸದ ದಿನಗಳಲ್ಲಿ ಬ್ಯಾಂಕಿಂಗ್ ಸಮಯದಲ್ಲಿ ನಿಮಗೆ ಸಹಾಯ ಮಾಡಲು ನಮ್ಮ ಶಾಖೆಯ ಸಿಬ್ಬಂದಿ ಲಭ್ಯವಿರುತ್ತಾರೆ*

**ಪ್ರ: ಡಿಜಿಟಲ್/ಚ್ಯಾಟ್ ಬೆಂಬಲ ಲಭ್ಯವಿರುತ್ತದೆಯೇ?**

ಉ: *ಇಲ್ಲ. ನೀವು ನಮ್ಮ ಗ್ರಾಹಕ ಸೇವೆಯನ್ನು* ***1800-103-3723*** *ಗೆ ಕರೆ ಮಾಡುವ ಮೂಲಕ ಸಂಪರ್ಕಿಸಬಹುದು*

**ಪ್ರ: ಬಗೆಹರಿಯದ ಸಮಸ್ಯೆಯನ್ನು ನಾನು ಹೇಗೆ ಮೇಲಧಿಕಾರಿಗಳಿಗೆ ಕೊಂಡೊಯ್ಯುವುದು ?**

*ಉ: ಗ್ರಾಹಕ ಸೇವೆಯಿಂದ* ***(1800-103-3723)*** *ನಿಮ್ಮ ಸಮಸ್ಯೆಯನ್ನು ಬಗೆಹರಿಸಲಾಗದಿದ್ದರೆ, ನಿಮ್ಮ ರಿಲೇಶನ್‌ಶಿಪ್ ಮ್ಯಾನೇಜರ್ ಅಥವಾ ನಿಮ್ಮ ಶಾಖಾ ವ್ಯವಸ್ಥಾಪಕರನ್ನು ಸಂಪರ್ಕಿಸಲು ಹಿಂಜರಿಯಬೇಡಿ*

**ಪ್ರ: ಗೋ-ಲೈವ್ ಸಮಯದಲ್ಲಿ ಮತ್ತು ನಂತರದ ಗ್ರಾಹಕ ನೆರವಿನ ಅವಧಿಗಳು ಯಾವುವು?**

ಉ: *ಗ್ರಾಹಕ ಸೇವೆಯು* (1800-103-3723) *ದಿನದ 24 ಗಂಟೆಯೂ ಕಾರ್ಯನಿರ್ವಹಿಸುತ್ತದೆ*

**ಪ್ರ: ನಾನು ಸಹಾಯಕ್ಕಾಗಿ ಯಾವುದೇ ಶಾಖೆಗೆ ಭೇಟಿ ನೀಡಬಹುದೇ, ಅಥವಾ ನನ್ನ ಹೋಮ್ ಶಾಖೆಗೆ ಮಾತ್ರವೇ?**

ಉ: ಕೆಲಸದ ಸಮಯದಲ್ಲಿ ಯಾವುದೇ ಶಾಖೆಗೆ ಭೇಟಿ ನೀಡಬಹುದು

**ಪ್ರ: ಈ ಬದಲಾವಣೆಯ ಕಾರಣದಿಂದಾಗಿ ನಾನು ಸಮಸ್ಯೆ ಅಥವಾ ನಷ್ಟವನ್ನು ಎದುರಿಸಿದರೆ, ಅದನ್ನು ಹೇಗೆ ಪರಿಹರಿಸಲಾಗುತ್ತದೆ?**

ಉ: ನಿಮ್ಮ ಶಾಖಾ ವ್ಯವಸ್ಥಾಪಕರು ಅಥವಾ ರಿಲೇಶನ್‌ಶಿಪ್ ಮ್ಯಾನೇಜರ್ ಅಥವಾ ನಿಮ್ಮ ನಿಯಮಿತ ಏಜೆಂಟ್/ಬಿಸಿನೆಸ್ ಕರೆಸ್ಪೊಂಡೆಂಟ್ ಅಥವಾ ಗ್ರಾಹಕ ಸೇವೆಯನ್ನು ಸಂಪರ್ಕಿಸಿ ಮತ್ತು ಅವರ ಸಲಹೆಯನ್ನು ಪಡೆಯಿರಿ.

## 6. ಡಿಜಿಟಲ್ ಮತ್ತು ವಹಿವಾಟು ಸೇವೆಗಳು

**ಪ್ರ: ಹೊಸ ಮೊಬೈಲ್ ಆ್ಯಪ್ ಮತ್ತು IB ಗೆ ಲಾಗಿನ್ ಮಾಡುವುದು ಹೇಗೆ**

ಉ:

***ಹೊಸ ಬಳಕೆದಾರರಿಗಾಗಿ***

***ಹಂತ 1: ಆ್ಯಪ್‌ನಲ್ಲಿ ನೋಂದಾಯಿಸಿಕೊಳ್ಳಿ***

1. *ಮೊಬೈಲ್ ಬ್ಯಾಂಕಿಂಗ್ ಆ್ಯಪ್ ಅನ್ನು ಪ್ರಾರಂಭಿಸಿ.*
2. *ನಿಮ್ಮ ಆದ್ಯತೆಯ ಭಾಷೆಯನ್ನು ಆಯ್ಕೆ ಮಾಡಿ.*
3. ***Register** ಟ್ಯಾಪ್ ಮಾಡಿ.*
4. *ನಿಮ್ಮ ನೋಂದಣಿಯ ಪ್ರಕಾರವನ್ನು ಆಯ್ಕೆ ಮಾಡಿ:*
    - *ಅಸ್ತಿತ್ವದಲ್ಲಿರುವ ಡಿಜಿಟಲ್ ಬ್ಯಾಂಕಿಂಗ್ ಬಳಕೆದಾರರು*
    - *ಹೊಸ ಬಳಕೆದಾರರು*
5. *ನಿಮ್ಮ ನೋಂದಾಯಿತ* ***Mobile Number*** *ಮತ್ತು* ***Date of Birth*** (DOB)/ ***Date of Incorporation (DOI)*** *ಗಳನ್ನು ನಮೂದಿಸಿ.*
6. *ನಿಮ್ಮ ಮೊಬೈಲ್ ಸಂಖ್ಯೆಗೆ ಬಹು ಗ್ರಾಹಕರ ID ಗಳು ಲಿಂಕ್ ಆಗಿದ್ದರೆ, ಸೂಕ್ತವಾದ ಗ್ರಾಹಕ ID ಅನ್ನು ಆಯ್ಕೆ ಮಾಡಿ.*
7. *ಪರಿಶೀಲನಾ ವಿಧಾನವೊಂದನ್ನು ಆರಿಸಿ:*
    - *ಡೆಬಿಟ್ ಕಾರ್ಡ್*
    - *ಉಲ್ಲೇಖ ಸಂಖ್ಯೆ*
    - *ಆಧಾರ್ ಸಂಖ್ಯೆ*
8. *ಅಗತ್ಯವಿರುವ ಪರಿಶೀಲನಾ ವಿವರಗಳನ್ನು ನಮೂದಿಸಿ.*
9. *ನಿಮ್ಮ ಗ್ರಾಹಕರ ಮಾಹಿತಿಯನ್ನು ಪರಿಶೀಲಿಸಿ.*

***ಹಂತ 2: ಸಾಧನ ಮತ್ತು SIM ಪರಿಶೀಲನೆ***

10. *SIM* **ಮತ್ತು ಸಾಧನದ ಸಂಯೋಜನೆ** *ಯನ್ನು ಪೂರ್ಣಗೊಳಿಸಿ.*
    - *ಸಾಧನದ ಸಂಯೋಜನೆಯು ಯಶಸ್ವಿಯಾದರೆ, ಮುಂದಿನ ಹಂತಕ್ಕೆ ಮುಂದುವರಿಯಿರಿ.*
    - *NRI ಗ್ರಾಹಕರು* ***Skip SIM Binding*** *ಪರ್ಯಾಯ ದೃಢೀಕರಣ ಪ್ರಕ್ರಿಯೆಯನ್ನು ಅನುಸರಿಸಬಹುದು.*
11. *SIM ಬೈಂಡಿಂಗ್ ಅನ್ನು ಬಿಟ್ಟರೆ, ಅಗತ್ಯವಿರುವ* ***NRI*** **ಅಪಾಯ ಸ್ವೀಕಾರದ ಸಮ್ಮತಿಯನ್ನು** *ಒದಗಿಸಿ.*

***ಹಂತ 3: ದೃಢೀಕರಣ***

12. *ದೃಢೀಕರಣದ ಕೋಡನ್ನು ಪಡೆಯಿರಿ:*
    - *ಭಾಗ 1 SMS OTP ಮೂಲಕ*
    - *ಭಾಗ 2 ಇಮೇಲ್ ಮೂಲಕ*
13. *ಸಂಯೋಜಿತ ದೃಢೀಕರಣ ಕೋಡನ್ನು ನಮೂದಿಸಿ.*
14. *ದೃಢೀಕರಣ ಕೋಡನ್ನು ಊರ್ಜಿತಗೊಳಿಸಿ.*
15. *OTP ದೃಢೀಕರಣವನ್ನು ಪೂರ್ಣಗೊಳಿಸಿ.*

***ಹಂತ 4: ಲಾಗಿನ್ ರುಜುವಾತುಗಳನ್ನು ರಚಿಸಿ***

16. *ನಿಮ್ಮ **User ID** ಮತ್ತು **Password** ಅನ್ನು ರಚಿಸಿ.*
17. *ನೋಂದಣಿ ಯಶಸ್ವಿಯಾಗಿ ಪೂರ್ಣಗೊಂಡಿದೆ.*
18. *ಐಚ್ಛಿಕವಾಗಿ **ಬಯೋಮೆಟ್ರಿಕ್ ದೃಢೀಕರಣ**ವನ್ನು ಸಕ್ರಿಯಗೊಳಿಸಿ.*
19. *ಐಚ್ಛಿಕವಾಗಿ **MPIN** ವೊಂದನ್ನು ಹೊಂದಿಸಿ.*
20. *ಮೊಬೈಲ್ ಬ್ಯಾಂಕಿಂಗ್ ಡ್ಯಾಶ್‌ಬೋರ್ಡ್ ಅನ್ನು ಪ್ರವೇಶಿಸಿ.*

***ನೋಂದಣಿಯ ನಂತರದ ಲಾಗಿನ್ ವಿಧಾನಗಳು***

*ನಿಮ್ಮ ಖಾತೆಯನ್ನು ಸಕ್ರಿಯಗೊಳಿಸಿದ ನಂತರ, ನೀವು ಈ ಕೆಳಗಿನ ಯಾವುದೇ ವಿಧಾನಗಳನ್ನು ಬಳಸಿಕೊಂಡು ಲಾಗಿನ್ ಮಾಡಬಹುದು:*

- *ಬಳಕೆದಾರರ ID ಮತ್ತು ಪಾಸ್‌ವರ್ಡ್*
- *MPIN*
- *ಬಯೋಮೆಟ್ರಿಕ್ ದೃಢೀಕರಣ (ಬೆರಳಚ್ಚು/Face ID)*

***ಹೊಸ ಸಾಧನದಲ್ಲಿ ನೋಂದಾಯಿಸಿಕೊಳ್ಳುವ ಅಸ್ತಿತ್ವದಲ್ಲಿರುವ ಬಳಕೆದಾರರಿಗಾಗಿ***

1. *ಮೊಬೈಲ್ ಬ್ಯಾಂಕಿಂಗ್ ಆ್ಯಪನ್ನು ಪ್ರಾರಂಭಿಸಿ.*
2. *ನಿಮ್ಮ **User ID ಮತ್ತು Password** ಅನ್ನು ಬಳಸಿ ಲಾಗಿನ್ ಆಗಿ.*
3. *ಅಗತ್ಯವಿರುವ ಭದ್ರತಾ ಊರ್ಜಿತಗೊಳಿಸುವಿಕೆಗಳನ್ನು ಪೂರ್ಣಗೊಳಿಸಿ:*
    - *SIM ಬೈಂಡಿಂಗ್ ಊರ್ಜಿತಗೊಳಿಸುವಿಕೆ (ಅನ್ವಯಿಸಿದರೆ)*
    - *SIM ಸ್ವಾಪ್ ಪತ್ತೆ*
    - *ಸಾಧನದ ಫಿಂಗರ್‌ಪ್ರಿಂಟಿಂಗ್ ಮತ್ತು ವಿಶ್ವಾಸಾರ್ಹ ಸಾಧನದ ಊರ್ಜಿತಗೊಳಿಸುವಿಕೆ*
4. *ನಿಮ್ಮ ನೋಂದಾಯಿತ ಮೊಬೈಲ್ ಸಂಖ್ಯೆಗೆ ಕಳುಹಿಸಲಾಗುವ OTP ಅನ್ನು ನಮೂದಿಸಿ.*

5. ನಿಮ್ಮ MPIN ಮತ್ತು ಬಯೋಮೆಟ್ರಿಕ್ ದೃಢೀಕರಣವನ್ನು ಸಂರಚಿಸಿ (ಐಚ್ಛಿಕ).
6. ಸಕ್ರಿಯಗೊಳಿಸುವಿಕೆಯು ಪೂರ್ಣಗೊಂಡ ನಂತರ, ಭವಿಷ್ಯದ ಲಾಗಿನ್‌ಗಳನ್ನು ಈ ಕೆಳಗಿನವುಗಳನ್ನು ಬಳಸಿ ಮಾಡಬಹುದು:
    - ಬಳಕೆದಾರರ ID ಮತ್ತು ಪಾಸ್‌ವರ್ಡ್
    - MPIN
    - ಬಯೋಮೆಟ್ರಿಕ್ ದೃಢೀಕರಣ

## ಇಂಟರ್ನೆಟ್ ಬ್ಯಾಂಕಿಂಗ್‌ಗಾಗಿ ನೋಂದಾಯಿಸುವ ವಿಧಾನ

### ರೀಟೇಲ್ ಇಂಟರ್ನೆಟ್ ಬ್ಯಾಂಕಿಂಗ್ ನೋಂದಣಿ

1. ಇಂಟರ್ನೆಟ್ ಬ್ಯಾಂಕಿಂಗ್ ಲ್ಯಾಂಡಿಂಗ್ ಪುಟವನ್ನು ತೆರೆಯಿರಿ.
2. **Register** ಕ್ಲಿಕ್ ಮಾಡಿ.
3. ನಮೂದಿಸಿ:
    - ನೋಂದಾಯಿತ ಮೊಬೈಲ್ ಸಂಖ್ಯೆ
    - ಜನ್ಮ ದಿನಾಂಕ
4. ಬಹು ಗ್ರಾಹಕರ ID ಗಳು ಲಭ್ಯವಿದ್ದರೆ, ಸೂಕ್ತವಾದ ಗ್ರಾಹಕರ ID ಅನ್ನು ಆಯ್ಕೆ ಮಾಡಿ.
5. ಪರಿಶೀಲನಾ ವಿಧಾನವೊಂದನ್ನು ಆರಿಸಿ:
    - ಡೆಬಿಟ್ ಕಾರ್ಡ್
    - ಉಲ್ಲೇಖ ಸಂಖ್ಯೆ
    - ಆಧಾರ್ ಸಂಖ್ಯೆ
6. ಅಗತ್ಯವಿರುವ ಪರಿಶೀಲನಾ ವಿವರಗಳನ್ನು ನಮೂದಿಸಿ.
7. ನಿಮ್ಮ ಗ್ರಾಹಕರ ಮಾಹಿತಿಯನ್ನು ಪರಿಶೀಲಿಸಿ.
8. OTP ದೃಢೀಕರಣವನ್ನು ಪೂರ್ಣಗೊಳಿಸಿ:
    - ನಿಮ್ಮ ನೋಂದಾಯಿತ ಮೊಬೈಲ್ ಸಂಖ್ಯೆಯಲ್ಲಿ OTP ಅನ್ನು ಪಡೆಯಿರಿ
    - OTP ಅನ್ನುನಮೂದಿಸಿ
9. ನಿಮ್ಮ **User ID** ಮತ್ತು **Password** ಅನ್ನು ರಚಿಸಿ.
10. ನೋಂದಣಿ ಯಶಸ್ವಿಯಾಗಿ ಪೂರ್ಣಗೊಂಡಿದೆ.
11. ಇಂಟರ್ನೆಟ್ ಬ್ಯಾಂಕಿಂಗ್‌ಗೆ ಲಾಗಿನ್ ಮಾಡಿ:
    - User ID ನಮೂದಿಸಿ
    - Password ನಮೂದಿಸಿ

12. ಇಂಟರ್ನೆಟ್ ಬ್ಯಾಂಕಿಂಗ್ ಡ್ಯಾಶ್‌ಬೋರ್ಡ್ ಅನ್ನು ಪ್ರವೇಶಿಸಿ.

**ಅಸ್ತಿತ್ವದಲ್ಲಿರುವ ಗ್ರಾಹಕರಿಗಾಗಿಇಂಟರ್ನೆಟ್ ಬ್ಯಾಂಕಿಂಗ್ ಲಾಗಿನ್**

1. ಇಂಟರ್ನೆಟ್ ಬ್ಯಾಂಕಿಂಗ್ ಲಾಗಿನ್ ಪುಟವನ್ನು ತೆರೆಯಿರಿ.
2. ನಿಮ್ಮ **User ID** ಮತ್ತು ಪ್ರದರ್ಶಿಸಲಾದ **Captcha** ಗಳನ್ನು ನಮೂದಿಸಿ.
3. ನಿಮ್ಮ **Password** ನಮೂದಿಸಿ.
4. **Login** ಕ್ಲಿಕ್ ಮಾಡಿ.
5. ಇಂಟರ್ನೆಟ್ ಬ್ಯಾಂಕಿಂಗ್ ಸೇವೆಗಳನ್ನು ಭದ್ರವಾಗಿ ಪ್ರವೇಶಿಸಿ.

**ಲಭ್ಯವಿರುವ ಲಾಗಿನ್**

**ರುಜುವಾತುಗಳು**

**ಮೊಬೈಲ್ ಬ್ಯಾಂಕಿಂಗ್**

- ಬಳಕೆದಾರರ ID ಮತ್ತು ಪಾಸ್‌ವರ್ಡ್
- MPIN
- ಬಯೋಮೆಟ್ರಿಕ್ ದೃಢೀಕರಣ

**ಇಂಟರ್‌ನೆಟ್ ಬ್ಯಾಂಕಿಂಗ್**

- ಬಳಕೆದಾರರ ID ಮತ್ತು ಪಾಸ್‌ವರ್ಡ್
- ಕ್ಯಾಪ್ಚಾ ಪರಿಶೀಲನೆ (ಲಾಗಿನ್ ಸಮಯದಲ್ಲಿ)